International Journal of Kannada Research
www.kannadajournal.com

ISSN: 2454–5813
IJKR 2019; 5(1): 213-220
© 2019 IJKR
www.kannadajournal.com
Received: 16-11-2018
Accepted: 19-12-2018

**ಡಿ. ಎಸ್. ಶ್ರೀನಿವಾಸ ಪ್ರಸಾದ್**
ಪಿಎಚ್.ಡಿ, ಸಂಶೋಧನಾ ವಿದ್ಯಾರ್ಥಿ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

**Correspondence**
**ಡಿ. ಎಸ್. ಶ್ರೀನಿವಾಸ ಪ್ರಸಾದ್**
ಪಿಎಚ್.ಡಿ, ಸಂಶೋಧನಾ ವಿದ್ಯಾರ್ಥಿ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

# ನವೋದಯದ ಹಿನ್ನೆಲೆಯಲ್ಲಿ ದೊಡ್ಡರಂಗೇಗೌಡರ ಕಾವ್ಯಾಭಿವ್ಯಕ್ತಿ

**ಡಿ. ಎಸ್. ಶ್ರೀನಿವಾಸ ಪ್ರಸಾದ್**

ಕವಿಯಾದವನು ಮೂಲತ; ಭಾವಜೀವಿ. ಆದರೆ ಹಾಗೆ ಭಾವಜೀವಿ ಅನ್ನಿಸಿಕೊಂಡರೂ ಆತ ನೈತಿಕವಾದ ಮತ್ತು ಮಹತ್ತರವಾದ ಜವಾಬ್ದಾರಿಯನ್ನು ಹೊಂದಿರಲೇಬೇಕ್ಕಾಗುತ್ತದೆ. ಏಕೆಂದರೆ ಈ ಸಮಾಜದ ಭಾಗವಾಗಿ ಬದುಕುವ ಅವನ ಪ್ರತಿಹೆಜ್ಜೆಯೂ ಅವನ ಕವಿಹೃದಯದೊಂದಿಗೆ ಸಂವಾದ– ಸಹಸ್ಪಂದನಗಳಿಗೆ ಎಡತಾಕಿಕೊಳ್ಳುತ್ತಲೇ ಇರುತ್ತದೆ. ಆದಕಾರಣ, ದೈನಂದಿನ ಬದುಕನ್ನು ಒಳಬಿಟ್ಟುಕೊಳ್ಳುತ್ತಲೇ ಕಾವ್ಯದೊಂದಿಗಿನ ಒಡನಾಟವನ್ನು ಆತ ಸಂಪರ್ಕಕ್ಕೆ, ಸಂವಹನಕ್ಕೆ ಈಡುಮಾಡಿಕೊಳ್ಳಬೇಕಾಗುತ್ತಿರುತ್ತದೆ. ನಾಲ್ಕು ದಶಕಗಳನ್ನೂ ಮೀರಿದ ದೊಡ್ಡರಂಗೇಗೌಡರಂತಹ ಕವಿಯ ವಿಷಯದಲ್ಲೂ ಈ ಅಂಶ ಸತ್ಯಸ್ಯಸತ್ಯ. ಹೀಗಾಗಿಯೇ ತಮ್ಮ ಮೂಲ ಗುಣಧರ್ಮವಾದ ನವೋದಯದ ಕಾವ್ಯಶೈಲಿಯಲ್ಲಿ ಬದುಕನ್ನು ಊನವಾಗಿಸಲಿಲ್ಲ, ಬದಲಿಗೆ ಬದುಕಿನ ಹಾಜರಾತಿಯೊಂದಿಗೇ ಕಾವ್ಯದ ಉಪಸ್ಥಿತಿಯನ್ನೂ ಅದರ ಒಟ್ಟಂದದಲ್ಲಿ ಒಪ್ಪ– ಓರಣವಾಗಿಸಿ ಅದಕ್ಕೊಂದು ಅಚ್ಚುಕಟ್ಟಾದ ಚೌಕಟ್ಟನ್ನು ತನ್ನ ಅಭಿವ್ಯಕ್ತಿಯ ಕ್ರಮದಲ್ಲೇ ನಿರ್ಮಿಸಿಕೊಂಡರು. ಆದ್ದರಿಂದ ಇವರ ಕಾವ್ಯ– ಬದುಕಿನ ಮೂಲಸ್ರೋತ ಒಂದನ್ನು ಹೆಚ್ಚೆಂದು ಭಾವಿಸಿ ಮತ್ತೊಂದನ್ನು ಅವಗಣನೆಗೆ ಗುರಿಮಾದುವುದಿಲ್ಲ. ಅಷ್ಟರಮಟ್ಟಿಗೆ ದೊಡ್ಡರಂಗೇಗೌಡರ ಕಾವ್ಯಕೃಷಿಯ ಫಲಶ್ರುತಿ ಇತ್ಯಾತ್ಮಕವಾಗಿ ಕಂಡುಬರುತ್ತದೆ. ಆದರೆ ಇಲ್ಲಿ ಆ ಬದುಕಿನ ಎಲ್ಲವನ್ನೂ ಒಂದೇ ಆಪೋಶನಕ್ಕೆ ತಾನು ವಶ ಪಡಿಸಿಕೊಳ್ಳುವ ಹುಂಬತನವಿಲ್ಲ, ಆದರೆ ಪ್ರಶಾಂತವಾದ ಮತ್ತು ನಿರಾತಂಕವಾದ ನಿರ್ಲಿಪ್ತತೆಯಲ್ಲಿ ಬಂದುದಷ್ಟನ್ನೆ ಸ್ವೀಕರಿಸುವ ಬದುಕಿಗೆ ತಲೆಬಾಗಿ ನಡೆಯುವ ಗೌರವದ ನಡಿಗೆ ಎದ್ದು ಕಾಣುತ್ತದೆ.

> ನಮ್ಮ ಬಾಳಲೇನಿದೆಯೋ
> ಅದೇ ಲಭ್ಯವು
> ಅದೇ ಭಾಗ್ಯವು (ನಾದನಿನಾದ– ಕವಿತೆ; ಭಾಗ್ಯ)
> ನಮ್ಮ ಋಣದಲಿಲ್ಲದಿಹುದು
> ಎಂದೂ ಶೂನ್ಯವು
> ಆಗದು ಮಾನ್ಯವು (ಅದೇ)

ದೈನಿಕ ಬದುಕಿನ ಹಪಾಹಪಿತನಗಳಿಗೆ ಹಾತೊರೆಯದೆ ಮನಸ್ಸನ್ನು ಆ ಮೂಲಕ ಪ್ರಕ್ಷುಬ್ಧಗೊಳಿಸಿಕೊಳ್ಳದೆ ನಮ್ಮ ಬಾಳಿನ ಪಯಣ ಚಲನಾತ್ಮಕವಾಗಿ ಮುಂದುವರೆಯಬೇಕಾದರೆ ಇಂಥ ಸಹಜಸತ್ಯಗಳ ಅರಿವು ನಮಗಿರಬೇಕೆನ್ನುವುದನ್ನು ದೊರಂಗೌ ಸುಲಲಿತವಾದ ಪದಬಳಕೆಯ ಹಿತಮಿತವಾದ ಶಬ್ದಗಳಲ್ಲೇ ಕಂಡರಿಸುತ್ತಾರೆ.ಇಲ್ಲಿ ನಮಗೆ ಕಾವ್ಯ– ಬದುಕು ಎರಡೂ ತಮ್ಮತಮ್ಮ ಮೌಲ್ಯಗಳನ್ನು ಘನತೆಯಿಂದಲೇ ಕಾಪಾಡಿಕೊಳ್ಳುತ್ತವೆ. ಹಾಗಾಗಿ ಕಾವ್ಯ– ಬದುಕಿನ ಎರಡರ ಘನತೆಯೂ ಎತ್ತರದ ಸ್ಥಾನದಲ್ಲಿ ನಿಲ್ಲುತ್ತವೆ.
ಆದರೆ ಹೊಸತನ್ನು ಸಾಧಿಸದ ಹಾಗೆ ತನ್ನ ಗೆ ತಾನಿದ್ದುಬಿಡುವ ಮಾನವನ ಆಲಸ್ಯ ಹಾಗೂ ದಿವ್ಯನಿರ್ಲಕ್ಶ್ಯದ ಗುಣವನ್ನು ದೊರಂಗೌ ಎಂದಿಗೂ ಒಪ್ಪುವುದಿಲ್ಲ. ಸಾರ್ವಜನಿಕ ಬದುಕಿನಲ್ಲಿ ಮನುಜ ಯಾವತ್ತಿಗೂ ಅನ್ವೇಷಣೆ ಮತ್ತು ಸತತವಾದ ಪರಿಶ್ರಮಶೀಲವಾದ ಸಾಹಚರ್ಯವನ್ನು ಹೊಂದಿ ಅದರೊಂದಿಗೆ ಸೆಣಸಾಡುತ್ತಲೇ ಹೊಸ ಸೃಜನಶೀಲತೆಯ ಸಾಧ್ಯತೆಗಳಿಗೆ ತನ್ನ ಮೈ– ಮನಗಳನ್ನು ಸಜ್ಜುಗೊಳಿಸಿಕೊಳ್ಳಬೇಕೆನ್ನುವ ದೃಢವಾದ ನಂಬಿಕೆ ದೊರಂಗೌ ಅವರ ಕಾವ್ಯದಲ್ಲಿ ನಿಚ್ಚಳವಾಗಿ ವ್ಯಕ್ತವಾಗುತ್ತದೆ.

ಎಲ್ಲಿದೆ ಅತೃಪ್ತಿ.... ಅಲ್ಲಿದೆ ಹುಡುಕಾಟ
ಎಲ್ಲೆಲ್ಲಿ ಅತೃಪ್ತಿ.... ಅಲ್ಲಿದೆ ಪ್ರತಿಮಂತ್ರ !
ಪಡದಿರು ನೀ ತೃಪ್ತಿ ಅಲ್ಪ-ಸ್ವಲ್ಪದರಲ್ಲೇ

ಇರಿಸಿಕೋ ಆಕಾಂಕ್ಷೆ ನಿನ್ನ ಈ ಬಾಳಿನಲ್ಲೇ! (ನಾದನಿನಾದ ಕವಿತೆ ಮಹತ್ವಾಕಾಂಕ್ಷೆ)

ಈ ತೃಪ್ತಿಯ ಹುಡುಕಾಟ ದುರಾಸೆ ದುರ್ವಾಂಛೆಗಳ ನೆಲೆಗಟ್ಟಿನದ್ದಲ್ಲ, ಆದರೆ ಬದುಕಿನ ಸಾರ್ಥಕವಾದ ಮತ್ತು ಧನಾತ್ಮಕವಾದ ಈ ಹೋರಾಟದ ಹುಡುಕಾಟ ರಚನಾತ್ಮಕ ಬದುಕಿಗೇ ಹೊರತು ದಮನಕಾರೀ ಸಂಘರ್ಷಕ್ಕಲ್ಲ ಎನ್ನುವ ಮಹತ್ವಾಕಾಂಕ್ಷೆ ಇಲ್ಲಿದೆ.

ದೊರಂಗೌ ಬದುಕಿನುದ್ದಕ್ಕೂ ಕಾವ್ಯ- ಬದುಕಿನ ಮೂಲಮಾನಗಳನ್ನು ಸರಿಯಾಗಿ ಗ್ರಹಿಸಿದವರು. ಬದುಕೆನ್ನುವ ಸ್ವಾಯತ್ತ ಸಾಮ್ರಾಜ್ಯಕ್ಕೆ ಕಾವ್ಯವನ್ನು ಮೀಟುಗೋಲಾಗಿಸಿ ನೋಡಿದವರು. ಅದರ ಜೊತೆಜೊತೆಗೇ ಜೀವ- ಜೀವನ, ಕಾವ್ಯ- ಕಾವ್ಯಾಭಿವ್ಯಕ್ತಿಗೊಂದು ನೆಲೆ ಕಲ್ಪಿಸಿದವರು. ಬದುಕಿಗೆ ಬೇಕಾದ ಅವಶ್ಯಕ ಎಚ್ಚರ ಮತ್ತು ಗಂಭೀರ ಚಿಂತನೆ ಎರಡರ ಆಳ ಅಗಲಗಳನ್ನೂ ಕಾವ್ಯದಲ್ಲಿ ತಂದವರು.

ಸಮಾಜವು ನಿತ್ಯಪರಿವರ್ತನಶೀಲವಾದುದು. ಹತ್ತು-ಹಲವು ಸ್ಥಿತ್ಯಂತರ- ಮನ್ವಂತರಗಳಲ್ಲಿ ಗತಿಶೀಲವಾಗುತ್ತಾ ಸಾಗುವ ಸಮಾಜದ ಪರಿಚಲನೆ ಅಗಾಧ ಮತು ವ್ಯಾಪಕವಾದುದು. ಆಧುನಿಕ ಜಗತ್ತಿನಲ್ಲಿ ಸಹಾ ಸಮಾಜದ ಬದಲಾವಣೆ ಅದರ ಕ್ರಿಯೆ- ಪ್ರಕ್ರಿಯೆಗಳಲ್ಲಿ ಬೀಡುಬೀಸಾಗಿ ಉಂಟಾಗುತ್ತಲೇ ಇರುತ್ತದೆ. ಈ ನಿಟ್ಟಿನಲ್ಲಿ ಕವಿಗಳು ಈ ಸಾಮಾಜಿಕವಾದ ಪಲ್ಲಟಗಳನ್ನೂ- ವೈವಿಧ್ಯಮಯ ವಿದ್ಯಮಾನಗಳನ್ನು ಹೇಗೆ ಕಾವ್ಯದ ಪರಿಧಿಯಲ್ಲಿ ಅದಕ್ಕೊಂದು ಆಯಾಮವನ್ನು ಒದಗಿಸುತ್ತಿದ್ದಾರೆ ಎನ್ನುವುದೂ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ದೊಡ್ಡರಂಗೇಗೌಡರ ಕಾವ್ಯದಲ್ಲಿ ಕಾಣುವ ಸಮಾಜನಿಷ್ಠ ಕವನಗಳ ಅಧ್ಯಯನ ಆಸಕ್ತಿದಾಯಕವಾಗುತ್ತದೆ.

ಕವಿಯಾದವನ ದೃಷ್ಟಿ ಪ್ರತಿಭಾಸಂಪನ್ನವಾಗಿ ವಿಚಕ್ಷಣೆಯಿಂದಿದ್ದರೂ ವಿಶ್ವವಿಶಾಲವೂ ವಿಹಂಗಮವೂ ಆದ ಸಮಗ್ರ ಸಮಾಜದ ಎಲ್ಲ ಸಂಗತಿಗಳನ್ನೂ ಕವಿ ಒಳಗೊಳ್ಳಲು ಸಾಧ್ಯವಿಲ್ಲ. ಕುವೆಂಪು, ಬೇಂದ್ರೆ ಪು.ತಿ.ನ. ರಂಥ ಕವಿಗಳು ಸಮಗ್ರವಾಗಿ ಸಾಮಾಜಿಕವಾದ ಮುಖಗಳನ್ನು ಅನಾವರಣಗೊಳಿಸಲು ಪ್ರಯತ್ನಿಸಿದರು.. ಆದರೆ ಸಮಗ್ರವಾದ ಸಮಾಜದ ಎಲ್ಲಾ ವಹಿವಾಟುಗಳನ್ನೂ ಯಾರೂ ಸಂಪೂರ್ಣವಾಗಿ ಹೊರಚಾಚಿಸಲು ಅಸಾಧ್ಯ,ಎನ್ನುವುದೇ ಸಮಗ್ರ ಸಮಾಜದ ಹೆಗ್ಗಳಿಕೆ. ದೊರಂಗೌ ಸಹಾ ಈ ಬಗೆಯ ಅಸಮಗ್ರತೆಯಲ್ಲೇ ಸಮಾಜದ ಸಮಗ್ರತೆಯನ್ನು ಕಂಡಿದ್ದಾರೆ.

ಘಾತದ ಮೇಲೆ ಘಾತವಾಯ್ತೋ
ಓ ಸಮಾಜಭೈರವ
ಪ್ರೀತಿಯ ಕಾಯಕಲ್ಪವಿದೆ

ಮಮತೆಯ ಮಹಾಮುಲಾಮೂ ಇದೆ (ಯುಗವಾಣಿ, ಕವಿತೆ; ಮನವಿ)

ನೈರಾಶ್ಯದ ನಡುವೆಯೇ ಸಹನೀಯಗೊಳಿಸಿಕೊಳ್ಳುತ್ತಾ ಸಾಗಬೇಕಾದ ಆಶಾವಾದ ದೊರಂಗೌ ಅವರ ನಿಲುವೂ ಹೌದು, ನವೋದಯದ ಪ್ರಧಾನ ಲಕ್ಷಣವೂ ಹೌದು. ಒಳಿತು-ಕೆಡುಕಿನ ಸಮ್ಮಿಶ್ರ ಸಮಾಜದಲ್ಲಿ ಅಲಿಪ್ತವಾಗದೆ ಬಾಳುವ ಸವಾಲು ಸ್ಪರ್ಧಾತ್ಮಕವೆನ್ನುತ್ತಾರೆ. ಆದರೆ ಹಾಗೆ ಬದುಕುವುದು ಸಮಾಜದಲ್ಲಿ ಅತ್ಯಗತ್ಯ ಎನ್ನುತ್ತಾರೆ.

ಆಧುನಿಕ ಯುಗದಲ್ಲಿ
ಕೈತವದ ಸುಳಿಯಲ್ಲಿ
ಹಣ್ಣಾದ ಸಾಮಾನ್ಯ

ದಿನವೂ ಕನಲಿ (ಯುಗವಾಣಿ, ಕವಿತೆ; ಅಸಹಾಯಕರು)

ಅನ್ನದ ಹಾಹಾಕಾರದ ಬದುಕು ದೊರಂಗೌರನ್ನು ಇನ್ನಿಲ್ಲದ ಹಾಗೆ ಕಾಡಿದೆ. ನಿರ್ಭಾಗ್ಯರ ಬದುಕಿಗೆ ಕವಿ ರೊಚ್ಚಿಗೇಳುತ್ತಾರೆ.

ಎತ್ತ ತಿರುಗಿದರೂ ಮುತ್ತಿ ಮೊರೆಯುತಿವೆ
ಚಿತ್ತ ಇರಿದ ಕೂಗು
ಬಿದ್ದು ಬೀದಿಯಲಿ ಬಿಕ್ಕೆ ಬೇಡುತಿವೆ
ಹಿಡಿ ಕೂಳಿಗಾಗಿ ಕೊರಗು! (ಯುಗವಾಣಿ, ಕವಿತೆ; ಹಿಡಿ ಕೂಳಿಗಾಗಿ)ಆದರೆ ಅದಕ್ಕೆ ಉತ್ತರವೂ ಇದೆ.

ಹೃದಯಹೀನರ ಒರಟು ಮಾತಿಗೆ
ಒರಟೊರಟು ಮಾತೇ ಉತ್ತರ
ಕತ್ತೆ ಸದೃಶ ಮಂದಿ ನಡತೆಗೆ

ಕತ್ತೆಯೊದೆತವೇ ಉತ್ತರ (ಏಳು ಬೀಳಿನ ಹಾದಿ ಕವಿತೆ; ದೂರ- ಹತ್ತಿರ) ಈ ಧೈರ್ಯವಂತಿಕೆಯೇ ಶಕ್ತಿಯಾಗಲೆಂದು ಕವಿ ಬಯಸುತ್ತಾರೆ.

ಕವಿಯ ಭಾವನಾಪ್ರಪಂಚ ಅಪಾರ ಬಾಹುಳ್ಯವುಳ್ಳದ್ದಾಗಿದೆ. ಅದರಲ್ಲೂ ನವೋದಯಕಾಲದ ಕನ್ನಡ ಕವಿಗಳಲ್ಲಿ ಪ್ರೀತಿ-ಪ್ರೇಮ ಅದರ ಉಳಿದ ಸಾಧ್ಯತೆಗಳು ಅವರ ಕಾವ್ಯಗಳಲ್ಲಿ ಹಬ್ಬಿ ಹರಿದಾಡಿದೆ. ಬೇಂದ್ರೆಯಂಥ ಕವಿ ಪ್ರೀತಿ-ಪ್ರೇಮವನ್ನು ಪಾರಮಾರ್ಥಿಕ ಸತ್ಯದೆಡೆಗೂ ತಂದು ಪ್ರೀತಿಯ ರೂಪ-ಸ್ವರೂಪಗಳನ್ನು ಮತ್ತಷ್ಟು ಹಿಗ್ಗಿಸಿದವರು. ಇಂತಹ ಮತ್ತು ನವೋದಯ ಕಾಲದ ಇನ್ನಿತರ ಕವಿಗಳ ಅನುಸರಣೆ- ಪ್ರಭಾವವಲಯಗಳಿಂದ ಪ್ರೇರಣೆ ಪಡೆದು ಅನೇಕ ಕವಿಗಳು ಹುಟ್ಟಿಕೊಂಡರು. ಹಾಗೆ ಅದೇ ನವೋದಯದ ಮೂಲಸೆಲೆಯನ್ನು ಬಿಟ್ಟುಕೊಡದೆ ತಮ್ಮಕವಿತೆಗಳಲ್ಲೂ ಪ್ರೀತಿಯ ಅನಂತ ಸಾಧ್ಯತೆಗಳನ್ನು ಪರಿಭಾವಿಸಿದವರಲ್ಲಿ ದೊಡ್ಡರಂಗೇಗೌಡರೂ ಒಬ್ಬರು.

ಪ್ರೀತಿಯ ಅನಂತ ವ್ಯಾಪ್ತಿ- ಸೀಮಿತವಲಯಗಳಿಂದ ಮತ್ತು ಆಕರ್ಷಣೆಯ ಪದರುಗಳನ್ನು ದಾಟಿದ ಶಕ್ತಿಯಾಗಿ ಪ್ರೀತಿಯ ಚೆಲುವು ಇದೆ ಎಂದು ಬಲವಾಗಿ ನಂಬಿದ ಭರವಸೆಯ ಕವಿ ದೊಡ್ಡರಂಗೇಗೌಡರು.

ನಿನ್ನ ಕಂಡ ಗಳಿಗೆಯಲ್ಲೇ
ಪ್ರೇಮಾಕ್ಷರ ಕಲಿತೆ
ನಿನ್ನ ಹಿಂದೆ ಮುಂದೆ ತಿರುಗಿ

ಪ್ರೇಮದ ಕಾಗುಣಿತ ಅರಿತೆ ( ನೀಳ್ಗೀತೆಗಳು ಕವಿತೆ; ಪ್ರೇಮಪರೀಕ್ಷೆ)

ಆದರೆ, ಪ್ರೀತಿ ದೊರಂಗೌ ಅವರಲ್ಲಿ ವಿಶಿಷ್ಟವಾದ ಶಕ್ತಿಯಾಗಿಯೂ ಪರಿಗಣಿತವಾಗುತ್ತದೆ.

ಬೇವು ಬೆಳೆದ ಬಾಳಿನಲ್ಲಿ ಮಾವು ಮಲ್ಲಿಗೆ ಚೆಲ್ಲಿತು ಒಲವು
ಬೇಗೆ ಬಿಸಿಲ ಬಾನಿನಲ್ಲಿ ಚಂದ್ರತಾರೆ ಹೊಳೆಸಿತು ಒಲವು
ಕುದಿವ ಕಡಲ ಈಜುವಲ್ಲಿ ಸ್ನೇಹ ನೌಕೆ ನಡೆಸಿತು ಒಲವು
ಒಂಟಿಯಾಗಿ ನಡೆಯುವ ನನಗೆ ನಲ್ಮೆ ನಂಟಾಯಿತು ಒಲವು
(ಏಳುಬೀಳಿನ ಹಾದಿ, ಕವನ; ಒಲವೆಂಬುದೆ ಚೆಲುವು)
ನೀ ಬಳಿ ಇದ್ದರೆ ಚೆಲುವಿನ ಒಲವಿದೆ
ಬದುಕನೆ ಗೆಲ್ಲುವ ಆತ್ಮದ ಬಲವಿದೆ! (ಕಾವ್ಯಕಾರಂಜಿ, ಕವನ; ನೀ ಬಳಿ ಇದ್ದರೆ)

ಪ್ರೀತಿಯ ಸಮ್ಮೋಹಕತೆಯನ್ನು ದಾಟಿ ಮನೋಬಲವನ್ನು ಹೆಚ್ಚಿಸುವ ಬಾಳಿನ ಪೂರಕಶಕ್ತಿಯಾಗಿ, ಬದುಕಲ್ಲಿ ನಿರಾಸೆಗಳ ಲೋಕವನ್ನು ದಾಟಿ ಮುನ್ನುಗ್ಗುವ ಬಲವಾಗಿ ಒಲವನ್ನು ಕಾಣಿಸುವುದು ದೊಡ್ಡರಂಗೇಗೌಡರಲ್ಲೂ ಇತರ ನವೋದಯ ಕವಿಗಳಲ್ಲಿ ಕಾಣುವ ಹಾಗೇ ವ್ಯಕ್ತವಾಗುವ ವಿಧಾನ ತುಂಬಾ ಬೆಲೆಯುಳ್ಳದ್ದಾಗಿ ತೋರುತ್ತದೆ.

ಉನ್ಮಾದ ಮತ್ತು ಭಾವತೀವ್ರತೆಗೆ ಮೀಸಲಾಗಿಸದ ಪ್ರೇಮದ ಅಭೀಪ್ಸೆಗಳ ನಿವೇದನೆಯಲ್ಲಿ ಹೆಚ್ಚು ಅರ್ಥವಂತಿಕೆಯನ್ನು ಕಾವ್ಯದ ಮೈಯಲ್ಲಿ ತರಬೇಕೆನ್ನುವ ಇರಾದೆ ದೊರಂಗೌ ಅವರಲ್ಲಿ ಸೊಗಸಾಗಿ ಮೂಡಿದೆ.ನವೋದಯದ ಸ್ಫೂರ್ತಿ ಮತ್ತು ಉಲ್ಲಾಸದ ಜೀವಕೇಂದ್ರಗಳನ್ನು ಬಿಟ್ಟುಕೊಡದ ರೀತಿಯಲ್ಲಿ ಅನುಸ್ಯೂತವಾಗಿ ಹೊಂದಿಸಿಕೊಳ್ಳುವ ಈ ಚೇತೋಹಾರೀ ಪ್ರವೃತ್ತಿ ದೊರಂಗೌ ಅವರಲ್ಲಿ ಏಕಸೂತ್ರವಾಗಿಯೋ ಏಕತಾನತೆಯ ಭಾರದಲ್ಲೋ ಸಿಕ್ಕಿ ನಲುಗಿ ನಿಸ್ತೇಜಗೊಳ್ಳದೆ ಭಿನ್ನ-ವಿಭಿನ್ನ ಮಜಲುಗಳಲ್ಲಿ ವ್ಯಕ್ತವಾಗುತ್ತದೆ.

ನೂರು ನೋವಿನ ಬೆಟ್ಟ ಭಾರವ
ಇಳಿಸೋ ಆಸರೆ ಕೈಯಿದೆ
ಪ್ರೇಮಸಿಂಚನ ಸುರಿಸಿ ಸಲಹುವ

ತ್ಯಾಗಿ ಹೆಣ್ಣಿನ ಕಣ್ಣಿದೆ (ಜೀವಜೀವದ ಗೆಳತಿ, ಕವನ; ಸೌಖ್ಯದ ಖನಿ) ಪರಸ್ಪರ ಸೌಹಾರ್ದ ಸಂಸಾರಕ್ಕೆ ಭಾಷ್ಯ ಬರೆದ ಹಾಗೆ ಕವಿಯ ಆಶಯ ಇಲ್ಲಿದೆ.ಕವಿಯು ಇಲ್ಲಿ ದಾಂಪತ್ಯಕ್ಕೆ ಸಹಭಾಗಿತ್ವದ ಸಂಕೇತವಾಗಿಯೂ ಪ್ರೀತಿಯ ಬಾಂಧವ್ಯವನ್ನು ಹರಳುಗಟ್ಟಿಸುತ್ತಾರೆ.ಹೀಗೆ ಪ್ರೀತಿಯ ಅನಂತ ರೂಪಗಳು ಅನ್ಯಾದೃಶವಾಗಿ ಮಿಳಿತಗೊಂಡು ನುಡಿಯುವುದು ಅನನ್ಯವಾಗಿ ಕಂಗೊಳಿಸುವಂತಾಗಿದೆ ಎನ್ನಲಡ್ಡಿಯಿಲ್ಲ.

ನವೋದಯದ ಪ್ರಧಾನ ಗುಣಲಕ್ಷಣಗಳಲ್ಲಿ ಭೂಮಿ-ಭೂಮಿಪರವಾದ ಕಾಳಜಿಯೂ ಒಂದು. ಸ್ವತ; ರೈತಾಪಿಕುಟುಂಬದಿಂದ ಬಂದ ದೊರಂಗೌ ಸಹಾ ಈ ಮಣ್ಣಿನ ಸೊಗಡು, ದೇಸೀತನದ ವಾಸನೆಗಳನ್ನು ತಮ್ಮ ಕಾವ್ಯದ ಮುಖಾಂತರ ಹೊರಹೊಮ್ಮಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಜನಸಮುದಾಯದ ಭಾಷೆಯೇ ಜನಪರವಾದ ಕಾವ್ಯದ ಭಾಷೆ ಆಗಬೇಕು ಎನ್ನುವ ನಿಲುವಿನಲ್ಲಿ ಹೊರಡುವ ಇವರ ಕಾವ್ಯದಲ್ಲಿನ ಭೂಮಿಪರವಾದ ಅರಿವನ್ನು ಈ ಅಂಶಗಳಿಂದಲೇ ಕಟ್ಟಿಕೊಳ್ಳುತ್ತವೆ. ಸುಲಭಸಂವೇದಿಯಾಗಿ ಸ್ಪಂದಿಸಿಕೊಳ್ಳುವ- ಪ್ರತಿಸ್ಪಂದಿಸಿಕೊಳ್ಳುವ ಗುಣದಿಂದಲೂ ದೊರಂಗೌ ಕಾವ್ಯದ ನೆಲದ ಅಂತ;ಸತ್ವವನ್ನು ಹೀರಿ ಬೆಳೆಯುವ ವಿಕಾಸಕ್ರಮ ಅದರ ವಿನ್ಯಾಸಕ್ರಮ ತಕ್ಷಣವೇ ತಲುಪುತ್ತವೆ. ಯಾವುದೇ ಜಿಗುಟುತನವಿರದಂತೆ ನೆಲದ ಒಡಲಿನ ಸಾರವನ್ನೆಲ್ಲ ಹೇಳುವ ನಾಗಾಲೋಟದ ಭರಾಟೆಯಾಗಲೀ, ಸಮುದ್ರದ ಭೋರ್ಗರೆತದ ಹಾಗೆ ಒಮ್ಮೆಗೆ ದಾಂಗುಡಿಯಿಟ್ಟು ಸಾಗುವ ಲಹರಿಯಲ್ಲಿರದೆ, ಸಾವಧಾನದ ನಡೆಯಿಂದಲೇ ಮಾನವನ ಕ್ರೌರ್ಯ ಪಾಶವೀ ಕುಕೃತ್ಯಗಳ ರೂಕ್ಷ ಸ್ವಭಾವಗಳನ್ನು ಹಿಡಿಯುವ ದೊರಂಗೌ ಅವರ ಈ ಬಗೆಯ ಕಾವ್ಯಸಿದ್ಧಿ ಮತ್ತು ವಸುಂಧರೆಯ ಕುರಿತಾದ ಚಿಂತನೆಗಳಿಗೆ ಸರಾಗವಾಗಿ ಅವಕಾಶ ಸಿಗುತ್ತದೆ.

ಈ ಇಳೆ ಸುಂದರ
ಕೆಳೆ ಬಂಧುರ
ಅಸದಳ ಈ ಚರಾಚರ
ಈ ನೆಲೆ ಸಾವಿರ
ಕಥಾ ಹಂದರ

ಅನಂತ ಸೆಲೆಯ ಸಾಗರ (ಕಾವ್ಯಕಾರಂಜಿ, ಕವಿತೆ;ಈ ಇಳೆ ಸುಂದರ)

ಬೇಂದ್ರೆ, ಕುವೆಂಪು ಮೊದಲಾದ ನವೋದಯ ಪಂಥದ ಕವಿಗಳು ಹೇಗೆ ಭೂಮಿ ನಿಸ್ವಾರ್ಥಿ ಮನುಜನೇ ದುರುಳ ಎಂದರೋ ಅದೇ ಜಾಡನ್ನು ಸರ್ವಸಮ್ಮತವಾಗಿ ಒಪ್ಪುವ ಈ ಕವಿ ನಿಸರ್ಗದತ್ತವಾದ ಪ್ರಾಕೃತಿಕ ಸೌಂದರ್ಯದ ನಿಸ್ಪೃಹ ಚಟುವಟಿಕೆಗಳನ್ನು ಅಷ್ಟೇ ಆಸ್ಥೆಯಿಂದ ಗಮನಿಸುತ್ತಾರೆ. ಇಂದ್ರಿಯಾತೀತವಾದ ಅಗಮ್ಯನೆಲೆಯ, ಆದರೆ ಮುಕ್ತಸ್ವಾತಂತ್ರ್ಯದ ಸ್ವಚ್ಛಂದತೆಯಲ್ಲಿ ಇಡೀ ಜೀವಸಂಕುಲಕ್ಕೆ ಶುಭಕೋರುವ ಪ್ರಕೃತಿಯ ಚೆಲುವು ಕವಿಗೆ ಆಹ್ಲಾದವನ್ನೇ ಉಣಬಡಿಸಿದೆ. ಇದನ್ನು ಅದೇ ಪ್ರಫುಲ್ಲ ಸ್ಥಿತಿಯಲ್ಲಿ ಕವಿ ಬಣ್ಣಿಸುತ್ತಾರೆ.

ಎಚ್ಚರವಾಗಿಹ ಪಕ್ಷಿಯ ಕೂಗಲಿ
ಮತ್ಸರವಿರದಾ ಸವಿಗಾನ
ಹೊತ್ತಿನ ಪರಿಧಿಗೆ ಕತ್ತನು ಕೊಟ್ಟು

ಕಾಯಕವೆಸಗಿದೆ ತಿಳಿ ಗಗನ. (ಕಾವ್ಯಕಾರಂಜಿ, ಕವಿತೆ;ಇನಾಗಮನ)

ಭೂವಲಯಗಳನ್ನು ನುಂಗಿ ನೀರು ಕುಡಿಯುತ್ತಿರುವ ಮನುಜನ ದಾಳಿಕೋರತನವನ್ನು ಕವಿ ಮೊನಚಾಗಿಯೇ ವಿಡಂಬಿಸುತ್ತಾರೆ.

ಹುಟ್ಟಿದ ಮೇಲೆ ಮಾನವ ಹೆಜ್ಜೆ ಇಟ್ಟು ನಡೆದ

ಗೆಡ್ಡೆ ಗೆಣಸು ತಿಂದ
ಪ್ರಾಣಿಪಕ್ಷಿ ಕೊಂದ
ಅಲ್ಲಿ ಇಲ್ಲಿಬಿಡದೆ ಅಲೆದ

ನೆಲೆಇಲ್ಲದೆ ಅಲೆದೆ ಅಲೆದ( ಮಿಂಚಿನ ಗೊಂಚಲು, ಕವಿತೆ;ಪರಾಕ್ರಮ ಪ್ರಗಾಥ)

ಹೀಗೆ ಭೂಮಿಗೆದುರಾಗುವ ಕಂಟಕಗಳನ್ನೂ ವಿಶ್ಲೇಷಿಸುವುದು ಗಮನಾರ್ಹವಾದುದು.

ದೊಡ್ಡರಂಗೇಗೌಡರ ಕಾವ್ಯದಲ್ಲಿ ಕವಿಯ ಸ್ಥಾನಮಾನಗಳು – ಕವಿಯ ಖಾಸಗಿ ಜಗತ್ತನ್ನು ನವೋದಯ ಉಳಿದೆಲ್ಲ ಸಾಹಿತ್ಯಪಂಥಗಳಿಗಿಂತಲೂ ಹೆಚ್ಚು ಸಾಂದ್ರತೆಯಲ್ಲಿ ಸಾದ್ಯಂತವಾಗಿ ಬಳಸಿಕೊಂಡಿತು. ಕವಿ-ಕಾವ್ಯ, ಅವನ ಅನುಭವಜನ್ಯಲೋಕದ ಕಲ್ಪನಾಲಹರಿಗಳಿಗೆ ಹೊಸಹುಟ್ಟು ನೀಡುವ ಹಾಯಾದ ಅಸ್ತಿಭಾರವನ್ನು ಮೇಲ್ಪಂಕ್ತಿಯಾಗಿ ನವೋದಯ ಹಾಕಿಕೊಟ್ಟಿತು. ಕವಿಯ ಅಸ್ತಿತ್ವ ಮತ್ತು ಅವನ ವೈಯಕ್ತಿಕವಾದ ಆಲೋಚನೆ-ಅಭಿವ್ಯಕ್ತಿಗಳಿಗೆ ಹೀಗೆ ಜಾಗ ಮಾಡಿಕೊಂಡಿದ್ದು ಕೇವಲ ಕವಿಯ ಸ್ವಾತಂತ್ರ್ಯಕ್ಕೆ ದೊರೆತ ಮನ್ನಣೆ ಮಾತ್ರವಲ್ಲ, ಮುಂದೆ ಭಾರತೀಯ-ಪಾಶ್ಚಾತ್ಯ ಕಾವ್ಯಮೀಮಾಂಸೆಗಳ ವಿಮರ್ಶೆಗಳಲ್ಲಿನ ಕವಿಯ ಪಾತ್ರನಿರ್ವಹಣೆಯ ಕುರಿತಾದ ವ್ಯಾಖ್ಯಾನ-ಮರುವ್ಯಾಖ್ಯಾನಗಳಿಗೂ ಇದು ಮೊಟ್ಟಮೊದಲ ಮೆಟ್ಟಿಲಾಯಿತು.

ದೊಡ್ಡರಂಗೇಗೌಡರ ಕಾವ್ಯದಲ್ಲಿ ಸಹಾ ಅವರೊಳಗಿನ ಕವಿ ಸಾಕಷ್ಟು ಕವಿತೆಗಳಲ್ಲಿ ಹೊರಕಾಣುತ್ತಾನೆ.ಕವಿತೆಯೊಳಗಿನ ಭಾವಾಭಿವ್ಯಕ್ತಿಗಳಿಗೆ ಸ್ಫೂರ್ತಿಯಾದ ಕವಿಯ ಪಾತ್ರವನ್ನು ದೊರಂಗೌ ಅಷ್ಟೇ ಗೌರವದಿಂದಮನ್ನಣೆ ನೀಡಿ ತನ್ನೊಳಗಿನ ಕವಿಗೆ ಗಣನೀಯ ಸ್ಥಾನಮಾನ ನೀಡಿ ಅಸ್ತಿತ್ವವನ್ನೂ ಅಸ್ಮಿತೆಯನ್ನೂ ತಂದುಕೊಡುವಲ್ಲಿ ಹಿಂಜರಿದಿಲ್ಲ. ನವೋದಯದ ಎಳೆ ಹಿಡಿದ ಕಾವ್ಯರಾಶಿಯಲ್ಲಿ ಆ ಸಾಹಿತ್ಯದಲಕ್ಷಣವನ್ನೂ ಎತ್ತಿಹಿಡಿದು,ಕವಿಗೂ ಕೃತಜ್ಞರಾದುದರಿಂದಲೂಇದಕ್ಕೆ ಮಹತ್ವವಿದೆ.

ಹೂವಿನಂತೆ ಕವಿಯ ಕವಿತೆ
ಸಹಜವಾಗಿ ಅರಳುತಾ
ನುಡಿನುಡಿಯಲಿ ಕಂಪು ಸೂಸಿ

ಚೆಲುವಾಯಿತು ಬೆಳಗುತಾ (ಭಾವಭಾಸ್ಕರ, ಕವಿತೆ;ಕಾವ್ಯಲೋಕ)
ಹೀಗೆ ದೊರಂಗೌ ಅವರೊಳಗಿನ ಕವಿಗೆ ವಿಶೇಷ ಸ್ಥಾನ ಸಿಕ್ಕಿದೆ. ಕವಿಯ ಮುಕ್ತಸ್ವಾತಂತ್ರ್ಯದ ಸಿದ್ಧಿ;ಕವಿಯಾದವನಿಗೆ ಸ್ವಾತಂತ್ರ್ಯ ಮತ್ತು ಅದರ ಸೀಮೋಲ್ಲಂಘನ ಮಾಡುವ ತೆರೆದ ಅವಕಾಶಗಳು ಸದಾ ಇದ್ದೇ ಇರುತ್ತದೆ. ಆದರೆ ತಾನು ಏನು ಬರೆಯುತ್ತಿದ್ದೇನೆ, ಏನನನ್ನು ಸಹೃದಯರಿಗೆ ಕೊಡಮಾಡುತ್ತಿದ್ದೇನೆ ಎನ್ನುವುದರ ಆಳವಾದ ಅರಿವು ಕವಿಯನ್ನು ಬಿಟ್ಟುಹೋಗಬಾರದು. ದೊಡ್ಡರಂಗೇಗೌಡರ ಕಾವ್ಯದಲ್ಲಿ ಸಹಾ ಈ ಬಗೆಯ ನೈತಿಕ ಹೊಣೆಗಾರಿಕೆ ಕಾಣುತ್ತದೆ. ಕವಿಯಾದವನ ಸುದೀರ್ಘವಾದ ಪಯಣವನ್ನು ಅವರು ನಿರ್ದೇಶಿಸುವ ರೀತಿಯಲ್ಲೇ ಅದು ವ್ಯಕ್ತವಾಗುತ್ತದೆ.

ನನ್ನದು ನಡೆ–ನುಡಿಪಡೆಯುವ ಆಟ
ನುಡಿಯಲಿ ನಡೆಯನು ಬಿಂಬಿಸೋ ಬೇಟ
ನಡೆಯಲಿ ನಿಷ್ಠೆಯ ನಲ್ಮೆಯ ಊಟ

ನಡೆ–ನುಡಿ ಇನಿದಿರೆ ಅದೇ ಬಾಳ ಮಾಟ (ನಾದನಿನಾದ ಕವಿತೆ; ಸ್ಫೂರ್ತಿಸಿರಿ)
ಆದರೆ ಅದಷ್ಟರಲ್ಲೇ ಕವಿಮನಸ್ಸು ಆನಂದದಲ್ಲಿ ಮೈಮರೆತು ಓಲಾಡುವುದಿಲ್ಲ. ಬದಲಾಗಿ ಜೀವಂತವಾದ ಜಗತ್ತಿನ ಇಕ್ಕೆಲಗಳನ್ನೂ ಪರಿಶೀಲಿಸುವ ಎಚ್ಚರದ ಮನಸ್ಥಿತಿಯನ್ನೂ ಅದು ಮರೆಯದ ಹಾಗೆ ದಾಖಲಿಸಿಕೊಳ್ಳುತ್ತಾಹೋಗುವುದು ಗಮನೀಯವೆನ್ನಿಸುತ್ತದೆ.
ಸಭ್ಯ ಮತ್ತು ಶುದ್ಧವಾದ ಪರಿಸರವನ್ನು ಸೃಜಿಸುವ ಕ್ರಿಯೆಯಲ್ಲಿ ಕವಿಗೆ ಮುದವಿದೆ ಯಾವ ಮತ್ತು ಯಾರ ಶೃಂಖಲೆಗೂ ಸಿಲುಕದ, ನಿಲುಕದ ಕವಿಯ ಸಾರ್ವಭೌಮತ್ವವನ್ನು ಕವಿ ದೊಡ್ಡರಂಗೇಗೌಡರ ಕಾವ್ಯನಿವೇದನೆ ನವಿರಾಗಿ ಪಡಿಮೂಡುತ್ತದೆ.

ನನಗಿಲ್ಲ ಅರುಚಿಯ ಅರೆಬರೆ ಕಾಟ
ಸದಾ ಕವಿಸಮಯದ ಕಾವ್ಯದ ನೋಟ
ಹುಡುಕುವೆ ನಿರಂತರ ಸಾಹಿತ್ಯಕೂಟ
ಅಲ್ಲಿದೆ ಬದುಕಿನ ರಸಸ್ಫೂರ್ತಿ ತೋಟ (ಅದೇ)

ಆತ್ಮಕೇಂದ್ರಿತವಾದ ಸ್ವಾಯತ್ತ ಜಗತ್ತಿನಲ್ಲಿ ತನಗನ್ನಿಸಿದ ಕಲ್ಪನೆಗಳಿಂದ ಕವಿಯು ಕಾವ್ಯದ ಶ್ರೀಮಂತಿಕೆ–ಧೀಮಂತಿಕೆಯನ್ನು ಸೃಜಿಸುತ್ತಾನೆ.ಆದರೆ ಅದರ ಎಲ್ಲ ಇಕ್ಕೆಲೆಗಳಲ್ಲೂ ತನ್ನ ಸರ್ವಾಂಗವೂ, ಸರ್ವಾಂಗೀಣವೂ ಅದ ಸೃಷ್ಟಿಶೀಲಸಾಮರ್ಥ್ಯದ ಹಾಸುಬೀಸನ್ನು ವಿಸ್ತರಿಸಿ ಗೆಲ್ಲುವುದು ಸುಲಭವಲ್ಲ. ಅಧಿಕಾರಮುಕ್ತವಾದ ಅರಸೊತ್ತಿಗೆಯ ಗುತ್ತಿಗೆ ಇಲ್ಲದ ಹಸಿರಿನಲ್ಲೇ ನೆಮ್ಮದಿಯ ತಾಣವನ್ನು ಬಯಸುವುದೂ ಕವಿಯ ಬಹಳ ಪ್ರಸನ್ನವಾದ ಆಶಯವಾಗಿದೆ. ನವೋದಯದ ಪ್ರಧಾನ ಕವಿಗಳಲ್ಲಿ ಒಬ್ಬರಾದ ದೊಡ್ಡರಂಗೇಗೌಡರಲ್ಲೂ ಆ ಸಾಹಿತ್ಯಪಂಥದ ಆಶಯಗಳಲ್ಲೊಂದಾದ ಮಾನವತಾವಾದ–ಸಾಮಾಜಿಕ ಚಿಂತನೆಗಳಿಂದ ತಮ್ಮ ನಿರುದ್ವಿಗ್ನತೆಯಲ್ಲೇ ಅದನ್ನು ಆಳವಾಗಿ ಒಡಮೂಡಿಸಿದವರು.

ನೆಲದ ಪದವು ಕೇಳಿದೆ
ಮನದಿ ಮುದವು ಮೂಡಿದೆ
ಹೃದಯದ ರಾಗವು ಹಾಡಾಗಿದೆ
ಭಾವದಾ ನದಿಯದು ಉಕ್ಕಿ ಹರಿದಿದೆ
ಚೆಲುವಾ ತೆರೆದಿದೆ (ಭಾವಭಾಸ್ಕರ, ಕವಿತೆ;ನೆಲದಪದ)

ಅಗಾಧ ವಿಸ್ತಾರವನ್ನು ಪಡೆದುಕೊಳುತ್ತಾ ಅಂತರಂಗಶೋಧ ಮತ್ತು ಬಹಿರಂಗದರ್ಶನ ಮತ್ತದರ ಮೂಲಕ ಭಾವಸಮಷ್ಟಿಯ ನ್ನು ಹಿಡಿದಿಟ್ಟ ಕವಿ ಈ ಮೂಸೆಯಲ್ಲಿ ಸ್ವೋಪಜ್ಞತೆಯ ಮೂಲಕವೇ ಕವಿಯ ಎಂದೂ ರಾಜಿ ಮಾಡಿಕೊಳ್ಳಬಾರದ ಧೀಮಂತಿಕೆಯ ದಿಟ್ಟತನವನ್ನು ಮೌಲ್ಯಯುತವಾಗಿ ತಮ್ಮ ಕಾವ್ಯ ರಾಶಿಯ ತುಂಬಾ ಸಾಧಿಸಿಕೊಂಡು ಬರುತ್ತಾರೆ. ಹೀಗಾಗಿಯೇ ಕವಿಗೂ ಕವಿಯೊಳಗಿನ ಕಾವ್ಯಕ್ಕೂ ಇನ್ನಿಲ್ಲದ ಸಾತತ್ಯ ದೊರಕುತ್ತದೆ. ಅಲ್ಲಿ ಇವರಿಬ್ಬರ ಸಹಸಂಬಂಧಗಳು ಘನವಾಗಿ ರೂಪ ತಾಳಿ ಕಾವ್ಯಪರಂಪರೆಯ ಔಚಿತ್ಯದಲ್ಲಿ ಸಕ್ರಮವಾಗಿ ಸೇರಿಕೊಳ್ಳುತ್ತದೆ ಎನ್ನುವುದು ವಿಶೇಷ.
ಸಂತಸ ಹಂಚುವ ಸಾತ್ವಿಕ ಕವಿಯಾಗಿ ದೊರಂಗೌ ಕಂಡುಬಂದರೂ ಸಹ ಇದಮಿತ್ಥಂ ಎನ್ನುವ ನಿರ್ದಿಷ್ಟ ಕಕ್ಷೆ ಹಾಗೂ ವರ್ತುಲದಲ್ಲಿ ಬಂಧಿಯಾಗಿ ಅದರಲ್ಲೇ ಸೆಣಸಾಡಿ ಹೈರಾಣಾಗುವ ನಿರ್ಬಂಧಕ್ಕೆ ಈ ಕವಿಯ ಕಾವ್ಯಧೋರಣೆ ಒಪ್ಪುವುದಿಲ್ಲ. ಕಾವ್ಯದ ಒಳಗೂ ಹೊರಗೂ ತನ್ನ ನಿಲುವುಗಳೇನು ಎನ್ನುವುದನ್ನು ಬಹಳ ಸ್ಪಷ್ಟವಾಗಿ ದಾಖಲಿಸುವ ದೊರಂಗೌ ಅವರಲ್ಲಿ ಈ ಕ್ರಿಯೆಯು ಪ್ರಜ್ಞಾಪೂರ್ವಕವಾಗಿಯೇ ಸೇರ್ಪಡೆಯಾಗುತ್ತದೆ. ಬೇರ್ಪಡದ ಕಾವ್ಯದೊಂದಿಗಿನ ಸ್ಫೂರ್ತಿಯಿದ್ದರೂ ತನ್ನ ಉಪಸ್ಥಿತಿ ಮತ್ತದರ ಕ್ರಮಗಳನ್ನು ದಿಗ್ದರ್ಶಿಸಿಕೊಳ್ಳುವಾಗ ಈ ಕವಿಗೆ ಅನಿರ್ಬಂಧಿತವಾದ ತನ್ನದೇ ಆದ ಆಯ್ಕೆಯಲ್ಲಿ ಮುನ್ನಡೆಯುವ ಹಕ್ಕು ಇದೆ. ಅದನ್ನೇ ಸರಿ ಎನ್ನುವ ಅವರಲ್ಲಿ ಇದು ಅಹಾಂಕಾರದ ಅಥವಾ ಹಮ್ಮು–ಬಿಮ್ಮುಗಳ ಸಂಕೇತವಾಗಿ ಕಾಣಿಸುವುದಿಲ್ಲ. ಆದರೆ ಎಲ್ಲ ಭ್ರಮೆಗಳಿಂದ ಆಚೆ ಬಂದು ನೋಡುವ, ವಿಭ್ರಾಂತವಾದ ಅಯೋಮಯಗೊಳ್ಳದ ಪರಿವೀಕ್ಷಣೆ ಅವರ ಕಾವ್ಯಾದ ಸ್ವತ್ತಾಗಿದೆ.

ಪುಕ್ಕ ಕಟ್ಟಿಕೊಂಡು ಕುಣಿವಾಸೆ ನನಗಿಲ್ಲ
ಪ್ಪಿಕೊಂಡು ಬರೆವಾಸೆ ನನಗೆಲ್ಲ(ಜಗುಲಿ ಹತ್ತಿ ಇಳಿದು, ಕವಿತೆ; ನಾನು ಮಾತ್ತು ನನ್ನ ಜಗತ್ತು)

ಅಖಂಡ ಬದುಕಿನ ಜಿಜ್ಞಾಸುವಾಗಿದೊಡ್ಡರಂಗೇಗೌಡರ ಕಾವ್ಯಕೃಷಿ ಮತ್ತು ಕಾವ್ಯದ ಆಶಯಗಳು ಕಾವ್ಯದ ಓದುಗನನ್ನು ಕಳೆದುಕೊಳ್ಳದ ಹಾಗೆ ಪ್ರಸ್ತುತಿಗೊಳಿಸುವ ನಿಟ್ಟಿನಲ್ಲೂ ಇದು ಸಹಕಾರಿಯಾಗಬಲ್ಲದು. ಕವಿಗೆ ಸದಾ ಆಪ್ಯಾಯಮಾನ ಮತ್ತು ಆಪಾತಮಧುರವಾದ ಲೋಕಸತ್ಯವನ್ನೇ ಹೇಳಿ ತನ್ನ ಜವಾಬ್ದಾರಿ ಮುಗಿಯಿತೆಮ್ದು ಬಿಮ್ಮಾನೆ ಕೈತೊಳೆದು ಕುಳಿತುಬಿಡುವ ಪಲಾಯನವಾದವಿಲ್ಲ. ಅವರಲ್ಲಿ ಬದುಕಿನ ದುರ್ಭೇದ್ಯ ಕೋಟೆಗಳನ್ನು ಒಡ್ಡೆಯುವಾ ಹುಮ್ಮಸ್ಸಿದೆ. ಧೈರ್ಯಶಾಲೀ ಹಾಗೂ ಆತ್ಮಗೌರವದ ಹೆಜ್ಜೆಗುರುತುಗಳಲ್ಲಿ ತನ್ನತನದ ಛಾಪನ್ನು ಅಂಕಿತಗೊಳಿಸುವ ಸ್ವಾಭಿಮಾನದ ಕಾವ್ಯ ಆವರದ್ದಾಗಿದೆ. ಹೀಗೆನ್ನಲು ಅವರ ಕವನಗಳಲ್ಲೇ ಸಕಾರಣವಾದ ಉತ್ತರಗಳು ದೊರಕುತ್ತವೆ.

ಬರೆಯುವುದು ಹರಿಯುವುದು ಮತ್ತೊಮ್ಮೆ ಬರೆಯುವುದು
ಬರೆದದ್ದು ಓದುವುದು ಮತ್ತೆ ಮತ್ತೆತಿದ್ದುವುದು
ತಿದ್ದುತ್ತಾ ತಿದ್ದುತ್ತಾ ಕವಿತೆ ಹೊಸದಾಗುವುದು

ಕಾವ್ಯಕರ್ಮವೇ ಹೀಗೆ– ಮಣ್ಣಿನ ಮಗ (ಮಣ್ಣಿನ ಮಗ ಕವಿತೆ;ಕಾವ್ಯಕರ್ಮ)
ಹೀಗೆ ಪುನರ್ಮೌಲ್ಯಮಾಪನಕ್ಕೆ ಆತ್ಮನಿರೀಕ್ಷಣೆಗೆ ಪದೇಪದೇ ತನ್ನನ್ನು

ಒಳಪಡಿಸಿಕೊಂಡು ಸಾಗುವಂಥ ಕವಿಯೇ ಪ್ರಬುದ್ಧನಾಗುವ ಎಲ್ಲ ಅರ್ಹತೆಗಳನ್ನು ಪಡೆಯಲು ಸಮರ್ಥನಾಗುತ್ತಾನೆನ್ನುವುದು ಸರ್ವವಿದಿತವಾದ ಮತ್ತು ನಿರ್ವಿವಾದದ ಸಂಗತಿಯಾಗಿದೆ.ವಿಶ್ವವಹಿವಾಟಿನ ಸಂಕಟಗಳನ್ನು ಮೀರಿ ಆನಂದೋತ್ಕರ್ಷದಲ್ಲಿ ಸಡಗರಿಸುವ ಅಭೀಪ್ಸೆಯಲ್ಲಿ ಅರಳಿರುವ ಧನಾತ್ಮಕವಾದ ಜಗತ್ತನ್ನೂ ನೋಡುತ್ತಾ ಅದರಾಚೆಗಿನ ಒಳಸಾತ್ಯ-ಸತ್ವಗಳಿಗೂ ಕುತೂಹಲಿಯಾಗಿ ಮನಸ್ಸನ್ನು ಕೇಂದ್ರೀಕರಿಸುತ್ತಾ ಹೋಗುವ ದಾರಿ ಸರಳವಲ್ಲ. ಆದರೆ, ಸಂಕೀರ್ಣಜಗದ ಆಗುಹೋಗುಗಳನ್ನು ಸ್ವೀಕರಿಸುವ ಇಂಗಿತದಲ್ಲಿ ಎಲ್ಲವನ್ನೂ ಕಿತ್ತೊಗೆಯುವ ಧಿಮಾಕಿನ ಜಬರ್ದಸ್ತು ಕವಿಯಲ್ಲಿ ಸಿಗುವುದಿಲ್ಲ.

ಒಂದೊಂದೇ ಪಕಳೆಗಳ ಕಿತ್ತು
ವಿಷಯಸಮುದ್ರದೊಳಗೆ
ಅನುಭವದ ಲಂಗರು ಹಾಕಿ

ಬರಹವನು ನಿಲಿಸುವಾಸೆ ((ಜಗುಲಿ ಹತ್ತಿ ಇಳಿದು, ಕವಿತೆ; ಆಸೆ ಅರ್ಜುನ)

ಕಾವ್ಯಂ ನಿಚ್ಚಂಪೊಸತು ಎನ್ನುವ ಕವಿವಾಣಿಯ ಹಾಗೆ ಚರ್ವಿತಚರ್ವಣವಾದ ಹಳತು ವಸ್ತುವಿಗೇ ಜೋತುಬಿದ್ದು ಗೊಂದಲ ಗೋಜಲುಗಳಿಗೆ ಎಡೆಮಾಡಿಕೊಡದೆ ಕವಿ-ಕಾವ್ಯ ಸಂಬಂಧ ಅದರ ನಿರ್ವಹಣೆಯನ್ನು ದೊರಂಗೌ ನಿಷ್ಠೆಯಿಂದ ಬದ್ಧತೆಯಿಂದ ಪಾಲಿಸಿದ್ದಾರೆ. ಹಠಮಾರೀ ಧೋರಣೆಗಳ ಸೋಂಕಿಲ್ಲದ ಹಾಗೆ ಕಾಲ- ದೇಶಗಳ ಅತೀತವಾಗಿ ಕವಿಯ ಕಾವ್ಯಕೈಂಕರ್ಯ ನಿರುಪಾಧಿಕವಾಗಿ ಮುಂದೆ ಮುಂದೆ ಸಮಾಧಾನದ ರೀತಿನೀತಿಗಳಿಂದಲೇ ಕವಿಯ ಶ್ರೇಷ್ಠತನವನ್ನು ಜಾಹೀರುಗೊಳಿಸುತ್ತದೆ ಎನ್ನುವುದು ಶ್ಲಾಘನೀಯ ವಿಚಾರವಾಗಿ ದೊಡ್ಡರಂಗೇಗೌಡರ ಕಾವ್ಯಕ್ಕೂ ಹೀಗೆ ಅನ್ಯೋನ್ಯ ಬಾಂಧವ್ಯದ ಸಂಲಗ್ನತ್ವ ಸಿಗುತ್ತದೆ. .

ಕವಿಯಾದವನ ನಿಸರ್ಗದ ಕುರಿತಾದ ಹೇರಳವಾದ ಭಾವಸಂಪತ್ತಿಯ ಕವನಗಳು ಕನ್ನಡ ಸಾಹಿತ್ಯಚರಿತ್ರೆಯಲ್ಲಿ ವಿಪುಲವಾಗಿ ಮೂಡಿವೆ. ದೊಡ್ಡರಂಗೇಗೌಡರ ಕಾವ್ಯದ ವಿಷಯದಲ್ಲೂ ಇದು ನಿಜ. ಆದರೆ ಕವಿಯಾದವನು ಪ್ರಕೃತಿಯ ಚೆಲುವಿಗೆ ಅದರ ಒಲವಿಗೆ ಮನಸೋತು ವರ್ಣನೆ- ಬಣ್ಣನೆಗಳಲ್ಲಿ ಕಾಲ ಕಳೆಯುವಂತಾದಾಗ ಕವಿಯ ಸೃಷ್ಟಿಶೀಲ ಸಾಮರ್ಥ್ಯದ ಹಾಸುಬೀಸು ಏನು? ಯಾವುದರಲ್ಲಿ ಆತ ತನ್ನ ನೈಸರ್ಗಿಕ ಪ್ರತಿಭಾಸಂಪನ್ನತೆಯನ್ನು ಹಸಿರಿನೊಂದಿಗೆ ತನ್ನ ಪ್ರಸ್ತುತ ಜಗತ್ತಿನ ಲೋಕಸತ್ಯವನ್ನು ಸೆರೆಹಿಡಿಯಬಲ್ಲ ಎಂಬ ಸವಾಲಿನ ಪ್ರಶ್ನಾವಳಿಗಳು ಉದ್ಭವಿಸುತ್ತವೆ. ಹಾಗೆ ನೋಡಿದರೆ, ಈಎ ರೀತಿಯ ಪರಿವರ್ತನಶೀಲವೂ ಅನೇಕ ಅವಸ್ಥಾಂತರಗಳಲ್ಲಿ ಮನ್ವಂತರಕ್ಕೊಳಪಡುವ ಬದುಕಿನ ನಿತ್ಯಬದಲಾವಣೆಯ ಕ್ಷಣಗಳನ್ನು ತನ್ನ ಕಾವ್ಯಸಮ್ಮುಖವಾದ ಲಯದಲ್ಲಿ ಭಾವಾರ್ಥಸಹಿತವಾಗಿ ಮೂಡಿಸುವುದು ಕವಿಯ ಶಕ್ತಿಸಾಮರ್ಥ್ಯಕ್ಕೆ ಒರೆಗಲ್ಲು ಹಚ್ಚುತ್ತದೆ. ಆದ್ದರಿಂದ ನಿಸರ್ಗ ಮತ್ತು ಲೋಕದೊಳಗಿನ ಚಹರೆಗಳನ್ನು ಕವಿ ಕಾಣ್ಕೆಯಾಗಿ ಕಂಡು ಅದಕ್ಕೊಂದು ಆಕೃತಿಯನ್ನು ನೀಡಬೇಕಾಗುತ್ತದೆ. ಬೌದ್ಧಿಕವಾಗಿ, ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಕವಿಯಾದವನಲ್ಲಿ ಇವೆಲ್ಲವೂ ನೇರ್ಪುಗೊಳ್ಳುತ್ತಲೇ ಇರಬೇಕು. ದೊಡ್ಡರಂಗೇಗೌಡರಲ್ಲಿ ಇಂತಹ ಅವಿನಾಭಾವ ಸಂಬಂಧವನ್ನು ನಿಸರ್ಗ ಮತ್ತು ಬದುಕಿನ ಸಂಗತಿಗಳು ಆದ್ಯಂತವಾಗಿ ಪಡೆದುಕೊಳ್ಳುವಲ್ಲಿ ವಿಫಲವಾಗುವುದಿಲ್ಲ.

ವಿಶ್ವಾಸದ ಧೂಪ ಹರಡಲಿ
ಸ್ನೇಹ ದೀಪ ಪ್ರಜ್ವಲಿಸಲಿ
ಭಾವನೆಯ ಭೇರಿ ಮೊಳಗಲಿ

ಕಾಯಕದ ಬೀಸಣಿಗೆ ಬೀಸಲಿ ! ((ಕಾವ್ಯಕಾರಂಜಿ, ಕವಿತೆ; ಅಷ್ಟೋತ್ತರ)

ಇಲ್ಲಿ ಪ್ರಮುಖವಾಗಿ ಗಮನಿಸಿದರೆ, ಮಾನವಸಮಾಜದ ಸದಾಶಯಗಳಿಗೆ ಹಂಬಲಿಸುವ ಮನಸ್ಸು ಮತ್ತು ಧೂಪ-ದೀಪ ಭೇರಿ- ಬೀಸಣಿಗೆ ಮೊದಲಾದ ದೈನಿಕ ಜಗತ್ತಿನಲ್ಲಿ ಕಾಣುವ ಪದಾರ್ಥಗಳು ಬದುಕಿನೊಂದಿಗೆ ಹಾಯಾಗಿ ಸಂಪರ್ಕಕ್ಕೆ ಬಂದು ಸೇರುತ್ತವೆ. ಸೌಹಾರ್ದತೆಯ ಬಾಳುವೆ, ಮಾನವರ ಪರಸ್ಪರ ಅನುಬಂಧ ಐಕ್ಯಮತದ ಕಾಳಜಿಗಳ ಪ್ರಕಟಣೆಗೆ ಈ ಜಗದಲ್ಲಿ ದೊರಕುವ ವಸ್ತುಗಳೇ ಸಂಬಂಧವನ್ನು ಕಲ್ಪಿಸಿಕೊಂಡು ಕವಿತೆಯ ಸಾರವನ್ನು ಗ್ರಹಿಸುವ ಅರ್ಥವಂತಿಕೆಗೂ ಮತ್ತು ಅವಿನಾಶಿಯಾದ ಮೌಲ್ಯಗಳ ಪ್ರತಿಪಾದನೆಗು ಅನುವು ಮಾಡಿಕೊಡುವ ಅವಕಾಅಶದ ಹಿನ್ನೆಲೆಯಿಂದಲೂ ಈ ಬಗೆಯ ಕವಿತೆಗಳ ಧ್ವನಿಪೂರ್ಣ ಕಳಕಳಿ ಸ್ತುತ್ಯರ್ಹವಾಗುತ್ತದೆ. ಪ್ರತಿಭಾವಂತ ಕವಿಯೊಬ್ಬನ ಕಾವ್ಯದ ಒಳಗಣ್ಣಿನ ಅಪಾರವಾದ ಶಕ್ತಿಸಂಚಯನ ಅರಿವಾಗುವ ಮತ್ತು ಒಟ್ಟುಗೂಡುವ ಪರಿ ಹೀಗೆ ಫಲಪ್ರದವೆನ್ನಿಸುತ್ತದೆ.

ನೂರು ನುಡಿಗೂ ನಿಲುಕದಿರುವ

ಚೆಲುವಿನ ಸಿರಿಹಾಸು
ಕಣ್ಣನೋಟ ಮೀರಿ ನಗುವ
ಪತ್ರ ಪುಷ್ಪ ಸೊಗಸು (ಆರೋಹಣ, ಕವಿತೆ; ಇಚ್ಛೆ)

ಸುಂದರವೂ ಆಪ್ಯಾಯಮಾನವೂ ಆದ ಕಣ್ಣಿಗೆ ತಂಪನ್ನು ನೀಡುವ ಪ್ರಕೃತಿಯಲ್ಲಿ ಕವಿಗೆ ಅನಂತವಾದವಿಶ್ವಾಸವಿದೆ. ಅದು ಎಂದಿಗೂ ಅವರಲ್ಲಿ ಬತ್ತುವುದಿಲ್ಲ, ಆದರೆ ಈ ಸೌಂದರ್ಯವನ್ನು ಅವರು ಸುಖಿಸಿ ಸಂಭ್ರಮಿಸಿ ನಿರ್ಲಿಪ್ತವಾಗುವುದಿಲ್ಲ, ಏಕೆಂದರೆ, ಇಂದ್ರಿಯಗಳನ್ನು ಮೀರಿದ ನೋಟದಾಚೆಗೂ ಇರುವ ಹಸಿರಿನ ಸೊಗಸು ಮಾತುಗಳಲ್ಲಿ ಹೇಳಲಾಗದ್ದು ಎನ್ನುವ ಸ್ವಷ್ಟಾತ್ಮಕವಾದ ತಿಳಿವಿದೆ. ತಿಳಿತಿಳಿಯಾಗಿ ಬದುಕಿನ ಆಗರಕ್ಕೆ ಇದರ ಸಕಾರಾತ್ಮಕತೆ ಬಂದು ಪ್ರವೇಶಿಕೆ ಪಡೆಯಲಿ ಎನ್ನುವ ಈ ರೀತಿಯ ನಿಲುವು ದೊಡ್ಡರಂಗೇಗೌಡರಲ್ಲಿ ಅತೀವವಾದ ಶ್ರದ್ಧೆ ಮತ್ತು ಪರಿಪೂರ್ಣವಾದ ಘಟ್ಟಗಳಲ್ಲಿ ದುಡಿಯುತ್ತದೆ. ಕಾವ್ಯದ ಸಾಹಚರ್ಯ ಮತ್ತು ಬದುಕಿನ ವಿವಿಧ ತಲ್ಲಣ- ತಹತಹ ಸಂಯೋಗ- ವಿಯೋಗ ಹೀಗೆ ಎಲ್ಲದರ ಸಾಕ್ಷಿಪ್ರಜ್ಞೆಯಾಗಿ ನಿಸರ್ಗ-ಬದುಕಿನ ಚಹರೆಗಳಿವೆ.

6.1 ಸಾರ್ವತ್ರಿಕ ಸಂದೇಶವಾಹಕವಾಗಿ ನಿಸರ್ಗದ ಚಿತ್ರಣ; ಕಲುಷಿತ ವಾತಾವರಣದಲ್ಲಿ ಪರಕೀಯ ಭಾವನೆಯಲ್ಲಿ ತನ್ನಷ್ಟಕ್ಕೆ ತಾನೇ ಬಿರುಕುಗೋಡೆಗಳನ್ನು ನಿರ್ಮಿಸಿಕೊಂಡ ಮನುಜಕುಲದ ಈರ್ಷ್ಯೆ, ಕುತ್ಸಿತ ಬುದ್ಧ್ದಿಯ ಬಗೆಗೆ ಕವಿಗೆ ಹೇಯವೆನ್ನಿಸುತ್ತದೆ. ಸಂಕುಚಿತ ಭಾವನೆಗಳಲ್ಲಿ ಲಾಲಸೆಗಳ ಲೊಲುಪ್ತ ಪ್ರಪಂಚದಲ್ಲಿ ಸಮಾನಧರ್ಮ ಸಮಾನ ನೀತಿಯನ್ನು ಸದ್ದಿಲ್ಲದೇ ಉದ್ಘೋಷಿಸುವ ಪ್ರಕೃತಿಯ ಐಸಿರಿಯನ್ನು ಅರಿಯದ ಮನುಷ್ಯಜಾತಿಯನ್ನು ಕುರಿತು ಖೇದ ಮತ್ತು ವಿಸ್ಮಯ ಎರಡನ್ನೂ ಅಭಿವ್ಯಕ್ತಿಸುವ ದೊಡ್ಡರಂಗೇಗೌಡರ ವೈಖರಿ ಹೀಗಾಗಿಯೇ ಸರ್ವಕ್ಷೇಮಭಾವಕ್ಕೆ ತುಡಿಯುವ ಮತ್ತು ಅದನ್ನು ನೀಡಲು ಸಜ್ಜಾಗಿರುವ ಈ ಮಣ್ಣಿನ ಗುಣಾಢ್ಯತೆಯನ್ನು ಗೌರವಿಸಲೇಬೇಕೆನ್ನುತ್ತಾರೆ.ಇಲ್ಲಿ ಅದನ್ನು ಶಾಬ್ದಿಕವಾಗಿ ಮಾತ್ರ ರೂಪಿಸದೆ ಜನಸಮುದಾಯದ ಮತ್ತು ಸಾರ್ವಜನಿಕವಲಯದ ಗಂಭೀರವಾದ ಮನನ ಸಾಧ್ಯವಾಗಬೇಕು ಎನ್ನುವುದು ಕವಿಯ ಗಟ್ಟಿ ಆಂಬೋಣ.

ನಮ್ಮ ಮನಸ ಕಿತ್ತು ತಿನ್ನುವ
ವರ್ಗ ವರ್ಣ ಒಡೆದು ಬನ್ನಿ
ನಮ್ಮ ಹೃದಯ ಕಲಕಿ ಮೆರೆವ

ಕುಬ್ಜ ಭಾವ ಬಿಟ್ಟು ಬನ್ನಿ (ಆರೋಹಣ, ಕವಿತೆ; ಕರೆ)

ಸಮೃದ್ಧವಾದ ಸುಗ್ರಾಸವಾದ ಮಣ್ಣಿನ ಗುಣಗ್ರಾಹಿತ್ವವವನ್ನು ಅರಿಯದೆ ಅರ್ಥೈಸದೆ ಮೊಂಡುತನ– ಭಂಡತನದಲ್ಲಿ ಕಾಲ ನೂಕುತ್ತಾ ಇರುವ ಆಲಸೀ ಪ್ರಪಂಚದ ನಿರ್ವೀರ್ಯತನಕ್ಕೆ ಕನಲಿ ಕೃದ್ಧರಾಗುವ ದೊರಂಗೌ ನೇತ್ಯಾತ್ಮಕ ವಿಷಯಗಳಲ್ಲೇ ಮುಳುಗಿರುವ ಜನಸ್ತೋಮಕ್ಕೆ ನೆಲದ ವಿಹಂಗಮವಾದ ಧಾರಾಳತನವನ್ನು ಮಾನಸಿಕವಾಗಿ ಮತ್ತು ಇಡಿಯಾಗಿ ತುಂಬಿಕೊಳ್ಳಿ ಎನ್ನುವ ಅರ್ಹ ಸಂದೇಶವನ್ನು ನೀಡಿದ್ದಾರೆ.

ಹಕ್ಕಿ ಚಿಲಿಪಿಲಿ ಹಾಡಿದವೋ
ರೆಕ್ಕೆ ಬಿಚ್ಚಿ ಹಾರಿದವೋ
ಹೊಂಬಾಳೆ ಸುಳಿ ಹೊಳೆದಾವೋ

ಸೂಲಂಗಿ ತೆನೆ ಬಳುಕ್ಯಾವೋ (ಆರೋಹಣ ಕವಿತೆ; ಸಮಾನತೆಯ ಸೂರ್ಯ)

ಪ್ರಕೃತಿಯ ಚೆಲುವಿನ ವ್ಯಾಪಾರವನ್ನು ಬಣ್ಣಿಸುತ್ತಲೇ ಕವಿಯ ಮನೋಧರ್ಮ ಅಷ್ಟಕ್ಕೇ ಸ್ಥಗಿತಗೊಳ್ಳದೆ ಚಟುವಟಿಕೆ ಪಡೆದುಕೊಳ್ಳುತ್ತದೆ ಎನ್ನುವುದು ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ.

ಜಾತ್ಯತೀತನಾಗಿ ಧರ್ಮಾತೀತನಾಗಿ ಎಲ್ಲರಿಗೂ ಸಮಾನ ನ್ಯಾಯ ಸಮಾನನೀತಿಯ ಸಾರ್ಥಕ ಸೂರ್ಯನ ಔನ್ನತ್ಯವನ್ನು ಮನಗಾಣುವ ಅಭೀಪ್ಸವನ್ನು ಎಲ್ಲ ಜನಗಳೂ ಅಡಚಣೆಗಳಿಗೆ ಒಳಪದದೆ ಸ್ವೀಕರಿಸಲಿ ಎಂಬ ದೃಢವಾದ ಚಿಂತನೆ ಈ ಕವಿತೆಗೆ ಖಚಿತತೆಯನ್ನು ಮತ್ತದರ ಸರ್ವಸಮ್ಮತವಾಗುವ ಆದರ್ಶಗಳನ್ನು ಸ್ವಾಗತಾರ್ಹಗೊಳಿಸುತ್ತವೆ.

ಪ್ರಕೃತಿಯ ಸಮಸ್ತ ಮಾನ್ಯತೆಗೆ ಬಿಡುವಿಲ್ಲದೆ ದುಡಿದು ಜನತೆಯ– ಜೀವಸಂಕುಲದ ಒಟ್ಟಾರೆ ಸಂರಕ್ಷಣೆಗೆ ಕಂಕಣಾಬದ್ಧನಾಗಿ ಸೂರ್ಯ ನಿರ್ವಹಿಸುವ ಶಾಶ್ವತಸ್ಥಾನಮಾನವನ್ನು ಗ್ರಹಿಸಿಕೊಳ್ಳಲು ಅಸಮರ್ಥತೆ ಮತ್ತು ಜಡತ್ವದಲ್ಲಿರುವ ಜೀವನಧರ್ಮವನ್ನು ಕವಿ ಹಂಗಿಸುತ್ತಾರೆ. ಆದರೆ ಆ ಲೇವಡಿಯಲ್ಲಿ ಬೇಸರವಿದೆ. ಒಂದು ರೀತಿಯ ವಿಷಣ್ಣ ಭಾವತೀವ್ರತೆಯಿದೆ. ಅದನ್ನು ಹೇಳುವ ಕ್ರಮದಲ್ಲಿ ಮಾತ್ರ ಕವಿಗೆ ಯಾವುದರ ದಾಕ್ಷಿಣ್ಯವಾಗಲೀ,ಹಂಗಿನ ಅಡೆತಡೆಗಳಾಗಲೀ ಲೆಕ್ಕಕ್ಕೆ ಬರುವುದಿಲ್ಲ. ಏಕೆಂದರೆ, ಕವಿಯ ಉದ್ದೇಶ ನಿಸರ್ಗವನ್ನು ನೋಡುವುದು ಮಾತ್ರವಲ್ಲ, ಅದರ ಜೊತೆಜೊತೆಗೇಒಂದಾಗಿ ಬಾಳಿನ್ನ ನಿಯತಿಯನ್ನು ನಡೆಸಿಕೊಂಡು ಹೋಗುವ ಅದ್ವೈತಭಾವದ ಏಕತ್ರಸ್ಥಿತಿ ಮತ್ತು ಅನುರೂಪವಾದ ಅನುಸಂಧಾನವಾಗಲೇಬೇಕೆಂಬ ಹೆಬ್ಬಯಕೆ ಇದೆ. ನವೋದಯದ ಪ್ರಧಾನಧಾರೆಯಲ್ಲಿ ಪ್ರಕೃತಿ– ಮನುಷ್ಯನ ಲೋಕದ ಹೊಂದಾಣಿಕೆ ಸಾಮೀಪ್ಯದ ಸಾನ್ನಿಧ್ಯವನ್ನು ಬಯಸುವ ಹಾಗೇ ಅದೇ ದಾರಿಯ ದೊಡ್ಡರಂಗೇಗೌಡರ ಯೋಚನೆ ಮತ್ತು ಅವರ ಚಿಕಿತ್ಸಕ ನೋಟದ ಅಗಾಧತೆಗೆ ಹೀಗಾಗಿಯೇ ಅಪರಿಮಿತವಾದಂತಹ ತಿರುಳಿದೆ. ಇಂತಹ ಸದವಕಾಶವನ್ನು ಜೀವಜಗತ್ತು ತಪ್ಪಿಸಿಕೊಂಡು ನಂತರ ಅದಕ್ಕಾಗಿ ವ್ಯಥಿಸದಿರಲೆನ್ನುವ ದೊಡ್ಡರಂಗೇಗೌಡರ ಕಾವ್ಯ ಈ ಮುಖಾಂತರ ಇಲ್ಲಿ ಕವಿ–ಕಾವ್ಯ ಮತ್ತದರ ಸಮ್ಮಿಲನವನ್ನು ಸಾಧಿಸಿಕೊಳ್ಳುವಲ್ಲಿ ಸಫಲವಾಗುತ್ತಾ ಹೋಗುತ್ತದೆ.

ನವೋದಯ ಎಂದರೆ ಹೊಸಹುಟ್ಟು ಎಂದು ಅರ್ಥ. ಈ ಹೊಸ ಬಗೆಯಾ ದಾರಿಯಲ್ಲಿ ಮುನ್ನಡೆದ ಕವಿಗಳು ತಮ್ಮತಮ್ಮ ಪ್ರತಿಭಾಸಾಮರ್ಥ್ಯಕ್ಕೆ ಅನುಗುಣವಾಗಿ ಸಾಹಿತ್ಯಸೃಜಿಸಿದ್ದಾರೆ.ಪ್ರಸ್ತುತ ನವೋದಯದ ಹಿನ್ನೆಲೆಯಲ್ಲಿ ದೊಡ್ಡರಂಗೇಗೌಡರ ಕಾವ್ಯದ ಅಧ್ಯಯನದ ವಿಷಯವನ್ನು ನಾನು ಕೈಗೆತ್ತಿಕೊಂಡಿದ್ದರೂ ಅವರ ಕಾವ್ಯದ ಕುರಿತಾದ ಹೊಸವ್ಯಾಖ್ಯಾನಗಳಿಗೆ ಪುನರ್ಮನನಕ್ಕೆ ಅದರ ಮರುಓದಿಗೆ ಅವರ ಒಟ್ಟು ಸಾಹಿತ್ಯದ ಅವಗಾಹನೆ ಬಹಳ ಮುಖ್ಯವಾಗುತ್ತದೆ ಎನ್ನುವುದು ನನ್ನ ಬಲವಾದ ಅನಿಸಿಕೆಯಾಗಿದೆ. ಪಾಶ್ಚಾತ್ಯ ಕಾವ್ಯಮೀಮಾಂಸೆಯಾಗಲೀ, ಭಾರತೀಯ ಕಾವ್ಯಮೀಮಾಂಸೆಯೇ ಆಗಲಿ ಈ ರೀತಿಯ ಕವಿ–ಕಾವ್ಯದ ಅನುಸಂಧಾನವನ್ನು ಪರಿಶೀಲಿಸುವಾಗ ಅದರ ವಿಮರ್ಶಾಪ್ರಕಾರಗಳಲ್ಲಿ ಅದನ್ನು ಅಳೆದೂ ಸುರಿದೂ ಮೌಲ್ಯಮಾಪನಕ್ಕೆ ಒಳಪಡಿಸುವಾಗ ಇದರ ಮಹತ್ವವನ್ನು ಎತ್ತಿಹಿಡಿದಿದೆ.

ಜನಜನಿತವಾದ ಮತ್ತು ಪ್ರಚಲಿತ ಜಾಡನ್ನೇ ಹಿಡಿದು ಹೊರಟ ದೊಡ್ಡರಂಗೇಗೌಡರ ಕಾವ್ಯ ಅವರಿಗೆ ಜನಪ್ರೀತಿ– ಜನಪ್ರಿಯತೆ ಎರಡನ್ನೂ ತಂದುಕೊಟ್ಟಿರುವುದು ನಿಜ. ಆದರೆ ಅವಷ್ಟೇ ಕವಿಯ ಮೂಲಮಾನವಲ್ಲ. ಕವಿಯ ಚಿತ್ತವನ್ನು ಕಲಕಿದ, ಕದಡಿದ ನಿತ್ಯವೂ ಕಾದುವ ಸಂವೇದನೆಗಳಿಗೆ ದೊರಂಗೌ ತನ್ನೊಳಗಿನ ಕವಿಯನ್ನು ಬೇರೆಬೇರೆ ಸಾಹಿತ್ಯದ ರೂಪಸ್ವರೂಪಗಳ ಪ್ರಭೇದಗಳಲ್ಲಿ ದುಡಿಸಿಕೊಂಡಿದ್ದಾರೆ. ಕಾಲ– ದೇಶ ಪರಿಸ್ಥಿತಿಗಳಿಗೆ ಬದಲಾದ ಕಾಲಘಟ್ಟಗಳಿಗೆ ಅವರ ಸಾಹಿತ್ಯಸೃಷ್ಟಿಯ ಧೀಶಕ್ತಿ ಒಗ್ಗಿಕೊಂಡು, ಪಡೆಯಬಹುದಾದಷ್ಟು ಅಂತರಂಗದ ನಿವೇದನೆ ಸಾಮಾಜಿಕ ಸ್ಪಂದನೆಗಳನ್ನು ದಕ್ಕಿಸಿಕೊಂಡಿದೆ. ಅದನ್ನು ಭಾಷೆಯ ಜಾಯಮಾನಕ್ಕೆ ತಕ್ಕಹಾಗೆ ಸಾಹಿತ್ಯದ ಭೂಮಿಕೆ ಮತ್ತದರ ಕವಲುಗಳಿಗೆ ಸರಿಯಾಗಿ ಸಮಂಜಸವಾಗಿ ಇರಿಸಿ ವಿಕಾಸವಾಹಿಯಾಗುತ್ತಾ ಬಂದಿದೆ.

ಭಾವಗೀತಕಾರರಾಗಿ ಗೀತಗಾರುಡಿ,ಮಾವು–ಬೇವು, ಕಾವ್ಯಕಲ್ಯಾಣಿ,ಅಸೀಮರೂಪಿ, ಭಾವ–ಭಾಸ್ಕರ, ಭಾವಭಾಗೀರಥಿ, ಆರೋಹಣ, ರಾಗ–ರಂಗು,ಕದಳಿ ಖರ್ಜೂರ ಗೀತಸಿರಿ,ಮಿಂಚಿನಗೊಂಚಲು ಹೀಗೆ ಅಪಾರವಾಗಿ ಪ್ರಖ್ಯಾತಿ ಮತ್ತುವೈಶಾಲ್ಯವನ್ನು ಉಂಟಾಗಿಸಿದೆ..ಇದಲ್ಲದೆ, ದೊಡ್ಡರಂಗೇಗೌಡರ ಒಟ್ಟು ಸಾಹಿತ್ಯಕೃಷಿಯಲ್ಲಿ ಜಗುಲಿ ಹತ್ತಿ ಇಳಿದು, ಕಣ್ಣು ನಾಲಿಗೆ ಕಡಲು, ಗೆಯ್ಮೆ,ಸುವರ್ಣಸಂಚಯ, ಶ್ರಮಜೀವಿ ಹೂವುಚೆಲ್ಲಿದ ಹಾದಿ ಮುಕ್ತಕಾವ್ಯ, ನಿಕ್ಷೇಪ ಲೋಕಾಯಣ ಇತ್ಯಾದಿ ನವ್ಯಕಾವ್ಯಗಳೂ ಇವೆ.

ಗದ್ಯಸಾಹಿತ್ಯಸೃಷ್ಟಿ; ವರ್ತಮಾನದವ್ಯಂಗ್ಯದಲ್ಲಿ,ವಿಶ್ವಮುಖಿ, ವಿಚಾರವಾಹಿನಿ,ಸಾಹಿತ್ಯಸಿಂಧೂರ, ಹೃದಯಾಂತರಾಳದಿಂದ ಎನ್ನುವ ಗದ್ಯಬರಹಗಳಿವೆ. ಸಾಹಿತ್ಯಸರಸ್ವತಿ, ಜೀವಂತಜಾನಪದ, ಅಸೀಮವಾದ,ಆಕೃತಿ ಮತ್ತುಅನುಸಂಧಾನ, ಗಾರುಡಿಗ ಕವಿ, ಅಭಿನವ ವಾಲ್ಮೀಕಿ,ಹೊಸ ಓದಿನ ಬೆಳಕಿನಲ್ಲಿ,ಕನ್ನಡ ನವೋದಯ ಕಾವ್ಯ, ಸಾಹಿತ್ಯಸಾರಥಿ.. ಕುವೆಂಪು– ಬೇಂದ್ರೆ ಹಾಗೂ ಕನ್ನಡ ಕಾವ್ಯದಲ್ಲಿ ರಮ್ಯವಾದ ತೌಲನಿಕ ಅಧ್ಯಯನವೂ ಸೇರಿದ ಹಾಗೆ 30ಕ್ಕೂ ಅಧಿಕ ವಿಮರ್ಶಾಕೃತಿಗಳನ್ನು ನೀಡಿದ್ದಾರೆ. ಇವರ ರೂಪಕಗಳಾದ ಹಿಮಶ್ವೇತಾ, ಮಯೂರದರ್ಶನ,ಜಗದಗಲ ಮುಗಿಲಗಲ, ಸಾಧನಾಸಿರಿ ಚಂದ್ರಗಿರಿದರ್ಶನ, ಮರೆಯಲಾಗದ ಮನುಜರು ರಂಗಭೂಮಿಪ್ರಯೋಗಗಳಿಗೂ ಒಳಪಟ್ಟಿವೆ. ಭಕ್ತಿಗೀತೆ, ಮುಕ್ತಕ, ಸಿನಿಮಾ, ಹಾಯಿಕುಗಳು,ಸಂಗೀತನಿರ್ದೇಶನ, ಪ್ರವಾಸಸಾಹಿತ್ಯ ಹೀಗೆಲ್ಲ ವ್ಯಾಪಿಸಿಕೊಂಡಿರುವ ದೊಡ್ಡರಂಗೇಗೌಡರ ಅನ್ಯ ಆಸಕ್ತಿ ಮತ್ತು ಅನ್ಯಜ್ಞಾನಶಿಸ್ತುಗಳ ಪರಿವೀಕ್ಷಣೆಯೊಟ್ಟೊಟ್ಟಿಗೇ ಅವರ ಪ್ರಮುಖ ಪ್ರಾದುರ್ಭಾವದ ಅನ್ವೇಷಣೆಯ ಹೆಜ್ಜೆಗಳನ್ನು ಕಂಡುಕೊಳ್ಳುವಲ್ಲಿ ಇವರಈ ಬಗೆಯ ಕೃತಿಗಳ ಸಂಯೋಜಿತವಾದ ರಚನೆಗಳು ಸಹಾಯಕವಾಗುತ್ತವೆ.

ಬಹುಮುಖವಾದ ಆಸ್ಥೆಗಳನ್ನು ಗರ್ಭೀಕರಿಸಿಕೊಂಡು,ಅದನ್ನೇ ತನ್ನ ಬರಹದ ಹೇತುವಾಗಿಸಿ ಸಾಗುವಾಗ ಅದರ ಇಕ್ಕೆಲಗಳಲ್ಲೂ ದಿನಂಪ್ರತಿ ಬದುಕಿನ ಭಾವುಕತೆ–ವಾಸ್ತವಿಕತೆಗಳ ಸಂಘರ್ಷ, ಕನಸು–ವಾಸ್ತವದ ಲೋಕ, ಶ್ರೀಸಾಮಾನ್ಯನ ಬದುಕಿನ ದ್ವಂದ್ವ–ಜಂಜಡ, ಅವುಗಳ ತೇಲುಮೇಲಾಣಿಕೆಯ ತಿಕ್ಕಾಟಗಳನ್ನು ದೊಡ್ಡರಂಗೇಗೌಡರ ಕಾವ್ಯಲೇಖನಿ ಹಿಡಿದಿದೆ. ಜನವಾಣಿ ಬೇರು ಕವಿವಾಣಿಹೂವು ಎನ್ನುವುದನ್ನು ಬಲವಾಗಿ ಪ್ರತಿಪಾದಿಸುವ ದೊಡ್ಡರಂಗೇಗೌಡರು ಆವರೆಗಿನ ಶಿಷ್ಟಪದಬಳಕೆಯ ಲೋಕದಲ್ಲಿ ಗ್ರಾಮೀಣಪರಿಸರದ ಹಳ್ಳಿಗಾಡಿನ ಭಾಷಾ ಲಯಗಳಿಗೆ, ಅದರ ಮಟ್ಟುಗಳಿಗೆ ಜೀವಸ್ಪಂದವಾದುದನ್ನು ಇಲ್ಲಿ ಮರೆಯದೆ ದಾಖಲಿಸಲೇಬೇಕಾಗುತ್ತದೆ. ಕವಿಯಾದವನ ಎದೆಯಲ್ಲಿ ಹುಟ್ಟುವ ಅಸಂಖ್ಯಾತ ಮತ್ತು ಓತಪ್ರೋತವಾದರಸನಿಷ್ಠ ಕಲ್ಪನೆಗಳಿಗೆ ಲಂಗರು ಹಾಕಿಕೊಂದು ಅದನ್ನು ತನ್ನ ನಿರ್ದಿಷ್ಟ ಸಂಯಮದಲ್ಲಿ ನಿಗ್ರಹಿಸಿಕೊಂಡು ಮುಂದುವರೆಯ ಸಶೇಷಗುಣವನ್ನು ತಮ್ಮ ಕಳೆದ ನಾಲ್ಕೂವರೆ ದಶಕಗಳನ್ನೂ ಮೀರಿದ ಬುದ್ಧಿಪ್ರಪಂಚದಲ್ಲಿ, ಸಾರಸ್ವತಜಗತ್ತಿನಲ್ಲಿ ಜತನದಿಂದ ಕಾಪಿಟ್ಟುಕೊಂಡಿರುವುದಕ್ಕೆ ಅವರ ಕಾವ್ಯ– ಕಾವ್ಯದ ವ್ಯಕ್ತಿತ್ವದಲ್ಲೇ ಸೋದಾಹರಣೆಗಳು ಅಯಾಚಿತವಾಗಿ ಸಿಗುತ್ತವೆ.ಟೀಕೆ–ವಿಮರ್ಶೆಗಳಿಗೆ ಅಂಜದೆ, ಅಳುಕದೆ ನಿಷ್ಠುರಗೊಳ್ಳದೆ ಸದ್ದಿಲ್ಲದೆ ನಿಶ್ಯಬ್ದ ಜಗತ್ತಿನಲ್ಲಿ ತನ್ನ ಪಾಡಿಗೆ ಸಾಹಿತ್ಯದ ಇಷ್ಟಕಾಮ್ಯಾರ್ಥವನ್ನು ಈಡೇರಿಸಿಕೊಳ್ಳುವ ಸಹಜ ಬಯಕೆ ಕವಿಯನ್ನೂ ಸಹಜವಾಗಿರಿಸಿದೆ.

ದೊಡ್ಡರಂಗೇಗೌಡರ ಕಾವ್ಯಭಾಷೆ ಮತ್ತದರ ರೂಪಾಂತರ ಪ್ರಕ್ರಿಯೆಗಳು– ವಿನೀತ ಸ್ವಭಾವದ ಪ್ರಶಾಂತ ಮನೋಭಾವದ ದೊಡ್ಡರಂಗೇಗೌಡರ ವ್ಯಕ್ತಿತ್ವ ಕಾವ್ಯದ ಸತ್ಯ ಮತ್ತು ಬಹುಜನ ಸಮಾಜದ ಓರೆಕೋರೆ ಅದರ ಕರಾಳ ಸ್ವರೂಪದ ಭೀಕರ ಸಂಗತಿಗಳನ್ನು ತಿಳಿಸುವಾಗ ಅಂಜುವುದಿಲ್ಲ ಹಾಗೇ ಸೌಮ್ಯವಾಗುವುದಿಲ್ಲ, ಜಾಗತಿಕ ತಾಪಮಾನದ ದಗ್ಧ ಬಿರುಸು ಬಿಸುಪುಗಳನ್ನು ಇದ್ದುದ್ದನ್ನು ಇದ್ದ ಹಾಗೆಯೇ ಪ್ರಚುರಪಡಿಸುವ ಪ್ರಕಟಪಡಿಸುವ ಇರಾದೆ ಕವಿಯ ಲೋಕಸತ್ಯವನ್ನು ವಿಮುಖವಾಗಿಸದ ನೇರವಂತಿಕೆಯನ್ನು ತೋರಿಸುತ್ತಿರುವುದರ ದ್ಯೋತಕವಾಗುತ್ತದೆ.

ಹಿಂದೆ ಮಿನುಗಿತ್ತು ಅದು ನಿನ್ನೆಯ ಗುರುತು
ಇಂದು ಚಪಲಿಗರಮೇಳ , ಸೊಕ್ಕಿಗರ ತಾಳ

ವಿಕೃತಿ ವಿಲಾಸ ಲಲ್ಲೆಗಾರರ ಜಾಲ(ಏಳು ಬೀಳಿನ ಹಾದಿ ಕವಿತೆ;ವಿಲಾಸೀಮೇಳ)

ಸಾಹಿತ್ಯದ ವಿಷಯದಲ್ಲಿ ಮಹತ್ತರವಾದ ಬದಲಾವಣೆಗಳನ್ನು ಆರಂಭದ ಎರಡು ಉದ್ದೇಶಕ್ಕಾಗಿ ಅಂದರೆ ಭೂತಕಾಲದ ವಿಸ್ಮರಣೆ, ಭವಿಷ್ಯತ್ಕಾಲದ ಆತಂಕ ವರ್ತಮಾನಕಾಲದ ದುಗುಡಗಳನ್ನು ಕಾವ್ಯದ ಮೊನಚುತನಕ್ಕೆ ನಿರ್ಭಿಡೆಯಿಂದ ಉದ್ಯುಕ್ತವಾಗಿ ನಿರೂಪಿಸಿರುವ ರಚನಾಕೌಶಲದ ದೃಷ್ಟಿಯಿಂದಲೂ ಅಚ್ಚುಕಟ್ಟಾಗಿ ಈ ಕಾವ್ಯದ ರಿವಾಜು ಬೆಳೆದುಕೊಂಡಿದೆ. ಭಾಷೆ ಧ್ಯೇಯನಿಷ್ಠತೆಗೆ ಬದ್ಧವಾದ ಸ್ವರೂಪವನ್ನು ನಿಭಾಯಿಸಿಕೊಂಡಿದ್ದು ದಾಖಲಾರ್ಹ ಸಂಗತಿಯಾಗಿ ಉಳಿಯುತ್ತದೆ. ಹೊಸ ಬಗೆಯ ಕ್ರಮವೆನ್ನುವ ಹಾಗಿಲ್ಲದಿದ್ದರೂ ಸಹ ಅಪಸವ್ಯಗಳಿಗೆ ದಾಸರಾಗುತ್ತಾ ಹಳವಂಡಗಳಲ್ಲಿ ಮುಳುಗಿ ಭ್ರಮಾಲೋಕದಲ್ಲಿ ತೇಲಾದುತ್ತಿರುವ ಯುವಜನಾಂಗದ ಕಾಲಹರಣದ ದುರ್ವಾಂಛೆ ಕವಿಯನ್ನು ಕಲಕಿ ಕದಡಿದೆ ಈ ಹಿನ್ನೆಲೆಯಲ್ಲಿ ಕವಿಯು ಸಾರ್ವಜನಿಕ ಚಟುವಟಿಕೆಯ ಚಲನವಲನಗಳನ್ನು ಆಳವಾಗಿ ನಿರುಕಿಸುತ್ತಾನೆ ಎನ್ನುವುದೂ ಇಲ್ಲಿ ಮಹತ್ವದ್ದಾಗುತ್ತದೆ.

ಪ್ರಕೃತಿಯು ಮಾನವನ ಆಡೊಂಬೊಲವಿದ್ದಂತೆ, ಕವಿಗೆ ಅದು ರಸಾನುಭವ ಮತ್ತು ಅನುಭಾವವನ್ನು ಉಂಟು ಮಾಡುವ ತಾಣ. ಪ್ರಕೃತಿಯ ಹಲವು ಘಟನೆಗಳು ಕವಿಗಳ ಮನಃ ಪಟಲದಲ್ಲಿ ವೈವಿಧ್ಯಮಯವಾದ ಆವಿರ್ಭಾವವನ್ನು ಉಂಟುಮಾಡಿ, ಸೃಜನಶೀಲತೆಗೆ ಪ್ರೇರಕ ಶಕ್ತಿಯಾಗಿ ಬಂದಿರುವುದನ್ನು ಗಮನಿಸಬಹುದು. ಪ್ರಕೃತಿಯ ವಿವಿಧ ವ್ಯಾಪಾರಗಳಲ್ಲಿ ಅತಿ ಅದ್ಭುತವಾದ ಚೈತನ್ಯ ಪೂರ್ಣವಾಗಿ ಸೂರ್ಯೋದಯವೂ ಒಂದು. ಸೂರ್ಯ ಹಾಗೂ ಸೂರ್ಯೋದಯವು ಒಂದು ಭೌಗೋಳಿಕವಾದ ವಸ್ತು ವಿಷಯವಾದರೂ. ಕವಿಗಳ ಪಾಲಿಗದು ಕವಿಮನದ ಭಾವೋದಯ ಇದ್ದಂತೆ, ಸುಂದರ ಸೂರ್ಯೋದಯ ದೃಶ್ಯವು. ಕವಿಯಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಅರಿಯುವುದು.ಮುಖ್ಯ. ಸೂರ್ಯೋದಯವು ಹೊರಪ್ರಕೃತಿಯ ಅಂಶವಾದರೂ ಅದನ್ನು ಕವಿಗಳು ತಮ್ಮ ಅಂತರಾತ್ಮದ ಆನಂದದ ಸತ್ಯಕ್ಕೆ ಸಾಕ್ಷೀಕರಿಸಿಕೊಳ್ಳುತ್ತಾ. ಆ ಮೂಲಕ ಪ್ರಕೃತಿಯ ವಿರಾಟ್ ವಿಶ್ವರೂಪ ದರ್ಶನ ಪಡೆದ, ದರ್ಶನ ಸಮಾಧಿಸ್ಥಿತಿಯಲ್ಲಿ ಮುಳುಗಿಬಿಡುವ ಕವಿಗಳ ಸೌಂದರ್ಯಾತ್ಮಕವಾದ, ಶಿವಾತ್ಮಕವಾದ ದೃಷ್ಟಿ ಕೋನವನ್ನು ವಿಶ್ಲೇಷಿಸುವುದು.ಮುಖ್ಯ. ಇದು ದೊಡ್ಡರಂಗೇಗೌಡರ ಕಾವ್ಯಭಾಷೆಯಲ್ಲೂ ವ್ಯಕ್ತವಾಗಿದೆ ಆದರೆ ಅದು ಪಾರಮಾರ್ಥಿಕ ಭಾರದಲ್ಲಿ ಪೆಡುಸಾಗದೆ ಸರಳವಾದ ಧಾಟಿಯಲ್ಲೇ ಮೂರ್ತತೆಯಿಂದ ಅಮೂರ್ತದೆಡೆಗೆ ಚಿಮ್ಮುತ್ತದೆ. ಗೊಡ್ಡು ಗೋಜಲಾಗದ ನಿರಭ್ರವೂ ನಿರ್ಮಲವೂ ಆದ ಸರಾಗ ಶೈಲಿಯಲ್ಲೂ ಕೋಮಲವಾದ ಸುಕುಮಾರಧಾಟಿಯಪದ್ಧತಿಯನ್ನು ಅನುಸರಿಸಿಯೂ ಪ್ರಕೃತಿಯ ಇನ್ನಿತರವಾದ ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳನ್ನುನಿವೇದಿಸಬಲ್ಲೆ ಎನ್ನುವುದೇ ಕವಿಯ ನೈತಿಕವಾದ ಎಮತ್ತು ಅಚಲವಾದ ಮನೋದಾರ್ಢ್ಯತೆಗೆ ಕನ್ನಡಿ ಹಿಡಿಯುತ್ತದೆ. ದೊಡ್ಡರಂಗೇಗೌಡರ ಕಾವ್ಯದಲ್ಲಿ ಇವೆಲ್ಲವೂ ಯಾವುದೇ ರೀತಿಯಲ್ಲೂ ಸ್ಥಗಿತಗೊಳ್ಳದೆ ಮುಂದುವರೆಯುತ್ತದೆ. ಇಲ್ಲಿ ಅನುಸ್ಯೂತತೆಗೆ ಹೆಚ್ಚಿನ ಬಲವೇ ಹೊರತು ಅದರ ಪೃಥಕ್ಕರಣೆಗಲ್ಲ, ಮಾನವನ ಸಣ್ಣಬುದ್ಧಿ, ಸಮಾಜದಲ್ಲಿ ಕುತ್ಸಿತನಾಗಿ ಬಾಳುನೂಕುವ ಅವನ ಕುರಿತು ಅಸಾಧ್ಯವಾದ ಹೇವರಿಕೆಯನ್ನು ಖಂಡಿಸುತ್ತಾ ರೂಕ್ಷವಾಗಿ ಬಿಂಬಿಸುವಾಗಲೂ ಕವಿಮನ ತನ್ನ ಒಪ್ಪಿತ ಮನೋಭಾಷ್ಯದಿಂದ ದೂರಸರಿದು ಅಂತರವನ್ನು ಕಾಯ್ದುಕೊಳ್ಳುವುದಿಲ್ಲ. ದೊಡ್ಡಸ್ತಿಕೆಯ ದರ್ಪ, ಅಟ್ಟಹಾಸದ ವಿಕಟತೆಗಳನ್ನು ವಿರೋಧಿಸಿ ಮಾನವಜನಾಂಗದ ಪ್ರತಿಕೂಲ ಮತ್ತು ಪ್ರತಿಗಾಮೀ ನಿಲುವುಗಳು ಪ್ರಗತಿಪರವಾದ ನಿಸರ್ಗದ ದೊಡ್ಡರಂಗೇಗೌಡರ ಕಾವ್ಯದಲ್ಲಿ ನಿಸ್ವಾರ್ಥಚಲನೆಗೆ ಕೊಡಲಿಪೆಟ್ಟು ನೀಡುವುದನ್ನೂ ದೊಡ್ಡರಂಗೇಗೌಡರು ಅಧಿಕೃತಗೊಳಿಸಿ ನಿಖರತೆಯಲ್ಲೇ ಅದನ್ನು ಮಂಡಿಸುತ್ತಾರೆ. ಪ್ರಕೃತಿಯು ಮನುಷ್ಯನ ಬದುಕಿನ ಮೇಲೆ ವಿಶೇಷವಾದ ಪರಿಣಾಮವನ್ನು ಬೀರುತ್ತಾ ಬಂದಿದೆ. ಪ್ರಕೃತಿಯ ವೈಚಿತ್ರಗಳನ್ನು ತನ್ನಲ್ಲಿ ಅನುಭವ ಗ್ರಾಹ್ಯವಾಗಿಸಿಕೊಂಡು ಆ ಅನುಭವವನ್ನು ಸುಂದರವಾಗಿ ವರ್ಣಿಸುವ, ವಿಶೇಷತೆಯನ್ನು ಕಾಣುವ ಕಲೆಯೇ ಸಾಹಿತ್ಯ. ಆದ್ದರಿಂದ ಸಾಹಿತ್ಯಕ್ಕೆ ಮೂಲ ಪ್ರೇರಣೆ ಪ್ರಕೃತಿ ಎಂಬುದನ್ನು ಈ ಕವಿಯೂ ಮರೆತಿಲ್ಲ.ಸದಾ ಭಾವ ಪ್ರಪಂಚದಲ್ಲಿ ವಿಹರಿಸುವ ಕವಿಗೆ ಪ್ರಕೃತಿಯ ವಿವಿಧ ಘಟನೆಗಳಾದ ಬೈಗು, ಬೆಳಗು, ಖಗ, ಮೃಗ, ಹಕ್ಕಿಗಳ ಭೋರ್ಗರೆವ ಸಮುದ್ರ ಹೀಗೆ ಹತ್ತು ಹಲವು ಪ್ರಕೃತಿಯ ಘಟನೆ ಕವಿಯಲ್ಲಿ ಅದ್ಭುತವಾದ ಆಶ್ಚರ್ಯವನ್ನು ಅನಂತ ಆನಂದವನ್ನು ಉಂಟು ಮಾಡಿ ರಸಾನುಭವವನ್ನು ಮಾಡಿಸುತ್ತದೆ. ದೊರಂಗೌ ಸಹ ಈ ಬಗೆಯ ಸಚ್ಚಿದಾನಂದದ ನಿಸರ್ಗದತ್ತಕವಾದ ಸೌಂದರ್ಯಕ್ಕೆ ಮನಸೋತಿದ್ದಾರೆ. ಆದರೆ ಅದರಲ್ಲಿನ ಸಂದೇಶವಾಹಕತನ ಮತ್ತದರಲ್ಲಿರುವ ವರ್ಧಿಷ್ಣು–ಸಹಿಷ್ಣು ಗುಣದ

ಅವಿಚ್ಛಿನ್ನವಾದ ಸ್ಥಾಯೀಭಾವವಾದ ಚಿರಂತನತೆಯ ಸತ್ಯ ಅವರಿಗೆ ಬಲು ಕೌತುಕದ ವಿಷಯವಾಗಿ ಪ್ರಧಾನವಾಗುತ್ತಾ ಅವರ ಭಾಷೆಯೂ ಅಲ್ಲಿ ಘನೀಭವಿಸಿಕೊಳ್ಳುತ್ತಾ ಚಲಿಸುತ್ತದೆ.ಸಾವು–ನೋವು–ವಿಷಾದ ಈ ಎಲ್ಲ ವಿಘಟನೆ ವಿದಳನಗೊಳ್ಳುವ ಕ್ರಿಯೆಗಳನ್ನು ದೊರಂಗೌ ನಿಸರ್ಗದ ಜೊತೆಗೇ ಸಮೀಕರಿಸಿ ಅದನ್ನು ಗರಿಷ್ಠ ಪ್ರಮಾಣದಲ್ಲಿ ಅನುಭವಿಸುತ್ತಾರೆಪ್ರಕೃತಿಯ ಲಯಗಳನ್ನು ಬದುಕಿನ ಲಯದೊಂದಿಗೆ ಈ ಕವಿಯು ಸಮೀಕರಿಸಿ ನೋಡುವ ಪರಿಯೂ ಇದ್ದೇ ಇದೆ.. ಆದ್ದರಿಂದ ಕವಿಯಾದವನು ಪಡೆಯುವಅಸಾಧಾರಣಮತ್ತುಅದ್ಭುತಕಲ್ಪನೆಯನ್ನುಪ್ರಕೃತಿಯಪರಮ ಉಪಾಸಕರಾಗಿ ಸರ್ವಸ್ವವಾಗಿಯೂ ದೊರಂಗೌಸ್ವೀಕರಿಸುವವರು. ಅಂತೆಯೇ ಪ್ರಕೃತಿ ಆರಾಧನಾ ವಸ್ತುವಾಗಿರುವಕುರಿತುಜನಸಾಮಾನ್ಯರ ಆಡುಭಾಷೆಯಲ್ಲಿ ಪ್ರಕೃತಿಯನ್ನು ವರ್ಣಿಸುವ ಅವರ ಕೌಶಲವನ್ನು ಚರ್ಚಿಸಬಹುದು.

ಮುಗಿಲ ರಾಗ ಸುಜಲ ಬಳಗ
ಸಂಧಿಸಿ ಜಲತರಂಗ
ಹೊನ್ನಬಣ್ಣ ತೆರೆಸಿ ಕಣ್ಣ

ಮೂಡಿತು ಪ್ರಕೃತಿ–ಕವನ (ಏಳು ಬೀಳಿನ ಹಾದಿ ಕವಿತೆ;ಸೌಂದರ್ಯಸಂಧ್ಯಾ)ನವೋದಯ,ನವ್ಯಕಾವ್ಯ ಘಟ್ಟಗಳನ್ನು ಹಾದು ಬಂದಿರುವ ಕನ್ನಡದ ಹೆಮ್ಮೆಯ ಕವಿಗಳಾದ ಡಾ.ದೊಡ್ಡರಂಗೇಗೌಡರಿಗೆ ಪ್ರಕೃತಿಯು ವಾಸ್ತವವಾದ ಹಾಗೂಸೌಂದರ್ಯಾತ್ಮಕ ದೃಷ್ಟಿಯಿಂದ ಕಾಣುವಂತಹುದು. ಇವರು ಬಳಸುವ ಕಾವ್ಯದ ಧ್ವನಿ ವಿಭಿನ್ನವಾದದು. ಸೌಂದರ್ಯಪ್ರಜ್ಞೆ ಹಾಗೂ ವರ್ಣನಾವೈವಿಧ್ಯತೆಯಲ್ಲಿವಿಶಿಷ್ಟವಾಗಿರುವುದನ್ನು ಅಭ್ಯಸಿಸಲಾಗುವುದು. ಪು.ತಿ.ನ. ರವರಿಗೆ ಭಗವಂತನ ಕೊಡುಗೆಯಂತೆ ಕಾಣುವ ಪ್ರಕೃತಿಯನ್ನು ಸೌಂದರ್ಯಾತ್ಮಕ ದೃಷ್ಟಿಯಿಂದಲೇ ಗ್ರಹಿಸುತ್ತಾರೆ. ದಲಿತ ಬಂಡಾಯ ಕವಿಗಳಿಗೆ ಪ್ರಕೃತಿಯ ಘಟನೆಗಳು ಕಾಣುವ ಪರಿಯೇ ಬೇರೆ. ಹಾರುವ ಹಕ್ಕಿಗಳು ಸ್ವಾತಂತ್ರ್ಯದ ಸಂಕೇತವಾಗುತ್ತವೆ. ಕತ್ತಲೆ ನೋವು ಅಜ್ಞಾನದ ಸಂಕೇತವಾಗಿ ಕೆಂಪಾದ ಸೂರ್ಯ ಕ್ರಾಂತಿಯ ಹರಿಕಾರನಂತೆ ಕಂಗೊಳಿಸುತ್ತಾನೆ.ಕನ್ನಡ ಸಾಹಿತ್ಯದ ಸೂರ್ಯೋದಯವನ್ನು ದೊರಂಗೌ ಕವಿಯಾಗಿ ಶಿಶು ಸಹಜ ಪ್ರಕೃತಿ ಪ್ರೇಮವನ್ನು ಹೊಂದಿರುವಂಥವರು.ಪ್ರಕೃತಿಯೇ ಅವರಿಗೆ ಮುಕ್ತಿ ನೀಡುವ ಸಾಧನವೂ ಆಗುತ್ತದೆ..

ದೊಡ್ಡರಂಗೇಗೌಡರ ಬಹುಮುಖೀ ನೆಲೆಗಳ ಹಿನ್ನೆಲೆಯಲ್ಲಿ ಅವರ ಕಾವ್ಯಕೇಂದ್ರಿತವಾದ ವಿಸ್ತೃತ ಕೊಡುಗೆಯ ಬಗ್ಗೆ ಚರ್ಚೆಯಾಗುತ್ತದೆ. ಆದರೆ ಇವರ ಅದರ ಗಾಂಭೀರ್ಯದ ನಿಜದ ದನಿಗಳಾ ಅಭಿವ್ಯಕ್ತಿ ಕೂಡ ಬಹಳ ಹುಲುಸಾದುದು ಎನ್ನುವುದನ್ನು ಕಡೆಗಣಿಸುವ ಹಾಗಿಲ್ಲ. ಸಕಲ ಜೀವರಾಶಿಗಳಲ್ಲೂ ಸೃಷ್ಟಿಗೆ ಕಾರಣವಾಗುವ ನಿಸರ್ಗದ ಜವಾಬ್ದಾರಿಯುತ ನಡೆಯ ಜೊತೆಜೊತೆಗೆ ಕವಿಯು ಜಾನಪದದ ಸೊಗಡು ನಾಣ್ನುಡಿ, ನೆಲಮೂಲ ಸಂಸ್ಕೃತಿಯ ಜಾಯಮಾನದಿಂದ ನೋಡಿರುವ ಪರಿವೀಕ್ಷಣೆಗಳಿವೆ.

ನೋವಿರದ ಮನುಜ ಇರಲಾರನೆಲ್ಲೂ
ಸಾವಿರದ ಬದುಕು ಇರಲಾರದೆಲ್ಲೂ
ಕಾವಿರದೆ ಹುಟ್ಟು ಇರಲಾರದೆಲ್ಲೂ
ನೋವು ಸಾವೇ ಬದುಕೋ

–ಮಣ್ಣಿನ ಮಗ (ಮಣ್ಣಿನ ಮಗ,ಚೌಪದಿ; ಬದುಕು)

ಪರಿಪೂರ್ಣ ಎಂಬುವುದು ಎಲ್ಲಿಹುದೋ ನಾನರಿಯೇ
ಹರಿಹಾಯ್ದು ಎಡೆಯೆಲ್ಲ ಅರೆಬರೆಯ ಪರಿಯೇ
ಅರಿತಷ್ಟೂ ಉಂಟಯ್ಯ ಜಗದಗಲ ನಿಧಿಯೇ

ಕುರಿತ ದರ್ಶನಕೆ ಕಾಣ್ಕೆ ಕಾಣೋ –ಮಣ್ಣಿನ ಮಗ (ಮಣ್ಣಿನ ಮಗ,ಚೌಪದಿ; ಕುರಿತವಗೇ ಕಾಣ್ಕೆ)

ದೊಡ್ಡರಂಗೇಗೌಡರು ನವ್ಯದಲ್ಲಿಯೂ ಸಾಹಿತ್ಯರಚನೆ ಮಾಡಿದ್ದಾರೆ. ಆದರೆ ನಿಸರ್ಗದ ಅರಳುವ ಚೈತನ್ಯಕ್ಕೆ ಮಾರುಹೋದ ಕವಿಯಾಗಿ ಈ ನೆಲವನ್ನು ಬಂಗಾರದ ಭೂಮಿಯಾಗಿ ನೋಡುವುದರ ಹಿಂದೆ, ಗಂಧವತಿಯ ದುಸ್ಥಿತಿಯನ್ನು ನೆನೆದು ಮನಸಾರೆ ಕೊರಗುವ ಸಂಗತಿಗಳೂ ಇವೆ, ಮಮ್ಮಲಮರುಗುವ ವಿಹ್ವಲಗೊಳ್ಳುವ ಭಾವಗಳಲ್ಲಿ ದೊಡ್ಡರಂಗೇಗೌಡರ ನವೋದಯದ ಕಕ್ಕುಲಾತಿ ನಿಸರ್ಗದೊಟ್ಟಿಗಿನ ನಿರ್ವ್ಯಾಜ ಪ್ರೇಮ ಸರ್ವಾಂಗೀಣವಾಗಿ ಕಾಣುತ್ತದೆ.ಮನುಜನ ದೌರ್ಜನ್ಯಕ್ಕೆ ಅವನ ಸೌಜನ್ಯಕ್ಕೆ ಸಂಕಟ–ದುಮ್ಮಾನಗಳಿಗೆ ಮಿಡಿಯದೆ ಕೂತವರಲ್ಲ ದೊರಂಗೌ.ಇಂದ್ರಿಯಾತೀತವಾದ ಅಗಮ್ಯ ಗಂತವ್ಯಗಳ ನೆಲೆ–ಬೆಲೆಯನ್ನು ನವೋದಯದ ಕಾಳಜಿಯ ಸ್ತರದಲ್ಲೇ ಪ್ರಶ್ನಿಸುವ ಉತ್ತರಿಸುವ ಅವ್ಯಾಹತವಾದಂತಹ ವಿದಗ್ಧತೆ ದೊಡ್ಡರಂಗೇಗೌಡರಲ್ಲಿ ಅತ್ಯಂತ ಆರಾಮವಾದ ಅಂದರೆ ವಿಶ್ರಾಂತಸ್ಥಿತಿಯಲ್ಲಿ ಮಡುಗಟ್ಟುತ್ತದೆ.

**ಆಕರಗ್ರಂಥಗಳು**


1. ನಾಡಾಡಿ– ದೊಡ್ಡರಂಗೇಗೌಡ ನ್ಯೂ ಬೆಂಗಳೂರು ಪ್ರಿಂಟ್ ಮೀಡೀಯಾ ಸೆಂಟರ್– ಬೆಂಗಳೂರು
2. ಭಾವ ಭಾಗೀರಥಿ –ದೊಡ್ಡರಂಗೇಗೌಡ ಅಭಿಜಾತಪ್ರಕಾಶನ–ತುಮಕೂರು
3. ಮಣ್ಣಿನ ಮಾತುಗಳು –ದೊಡ್ಡರಂಗೇಗೌಡ ಸುಮುಖ ಪ್ರಕಾಶನ, ಬೆಂಗಳೂರು